
## ನಿಮ್ಮ ವಿಮಾ ಕಂಪೆನಿಯು
## ನಿಮ್ಮ ದೂರುಗಳಿಗೆ ಕಿವಿಗೊಡುತ್ತಿದೆಯೇ?



ನಿಮ್ಮ ವಿಮಾ ಕಂಪೆನಿಯು ನಿಮ್ಮ ದೂರುಗಳನ್ನು
ನಿವಾರಿಸದಿದ್ದರೆ ದಯವಿಟ್ಟು ಸಂಪರ್ಕಿಸಿರಿ.

**ಐಆರ್‌ಡಿಎ ಗ್ರಿವೆನ್ಸ್ ಕಾಲ್ ಸೆಂಟರ್**
**ನಿ:ಶುಲ್ಕ ನಂ : 155255**


ನಿಮ್ಮ ದೂರನ್ನು ನೋಂದಾಯಿಸಿಕೊಳ್ಳಲು ಮತ್ತು ಅದರ ತಾಜಾ ಸ್ಥಿತಿಯನ್ನು
ತಿಳಿದುಕೊಳ್ಳಲು ನೀವು ಇಲ್ಲಿ ನಮಗೆ ಇಮೈಲ್ ಮಾಡಬಹುದು www.igms.irda.gov.in


A public awareness initiative by
ಇವರಿಂದ ಒಂದು ಸಾರ್ವಜನಿಕ ಜಾಗೃತಿ ಉಪಕ್ರಮ
INSURANCE REGULATORY AND
DEVELOPMENT AUTHORITY
Promoting Insurance. Protecting Insured.
www.irda.gov.in



INSURANCE REGULATORY AND
DEVELOPMENT AUTHORITY
ಇವರಿಂದ ಒಂದು ಸಾರ್ವಜನಿಕ ಜಾಗೃತಿ ಉಪಕ್ರಮ


Bima Bemisaal



# ಜೀವ ವಿಮೆಯ
# ಬಗ್ಗೆ ಕೈಪಿಡಿ

ಪರಿವಿಡಿಗಳು :


1. ಈ ಕೈಪಿಡಿಯ ಬಗ್ಗೆ 1

2. ಜೀವ ವಿಮೆ 2

3. ಆಗಾಗ ಕೇಳಲಾಗುವ ಪ್ರಶ್ನೆಗಳು 8

4. ಪಾಲಿಸಿಧಾರಕರ ಸೇವೆ TAT ಗಳು 18

5. ನಿಮ್ಮಲ್ಲಿ ದೂರುಗಳಿದ್ದರೆ 19


## 1. ಈ ಕೈಪಿಡಿಯ ಬಗ್ಗೆ

ಈ ಕೈಪಿಡಿಯು ಜೀವ ವಿಮೆಯ ಮಾರ್ಗದರ್ಶನದ ಬಗ್ಗೆ ಇನ್‌ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ) ಇವರಿಂದ ವಿನ್ಯಾಸಗೊಳಿಸಲಾಗಿದೆ ಮತ್ತು ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುತ್ತದೆ. ಇಲ್ಲಿ ನೀಡಲಾದ ಮಾಹಿತಿಯು ಸಂಬಂಧಿತ ಕಾನೂನುಗಳನ್ನು/ ನಿಯಮ/ಗಳನ್ನು ಅಥವಾ ನಿಯಂತ್ರಣಗಳನ್ನು ಬದಲಾಯಿಸುವುದಿಲ್ಲ ಅಥವಾ ಪ್ರಾವಿಧಾನಗಳನ್ನು ತಳ್ಳಿಹಾಕುವುದಿಲ್ಲ.

ಪಾಲಿಸಿಯ ಬಗ್ಗೆ ನಿರ್ದಿಷ್ಟವಾದ ಮಾಹಿತಿ ಅಥವಾ ಇತರ ಯಾವುದೇ ಹೆಚ್ಚುವರಿ ಮಾಹಿತಿಗಾಗಿ ದಯವಿಟ್ಟು ಲೈಸನ್ಸ್ ಇರುವ ಏಜೆಂಟರನ್ನು ಅಥವಾ ಬ್ರೋಕರರನ್ನು ಅಥವಾ ಐಆರ್‌ಡಿಎಯಲ್ಲಿ ನೋಂದಾಯಿಸ್ಪಟ್ಟ ವಿಮಾ ಕಂಪೆನಿಯನ್ನು ಸಂಪರ್ಕಿಸಿರಿ.

## 2. ಜೀವ ವಿಮೆ

- ಜೀವ ವಿಮೆಯು ಮೃತ್ಯು ಅಶಕ್ತತೆ, ಅಪಘಾತ ಸೇವಾ ನಿವೃತ್ತಿ ಮುಂತಾದ ಮಾನವ ಜೀವನದ ಅನಿಶ್ಚಿತತೆಗಳೊಂದಿಗೆ ಜೋಡಿಕೊಂಡಿರುವ ಆರ್ಥಿಕ ಸುರಕ್ಷೆಯಾಗಿದೆ. ಮಾನವ ಜೀವನವು ನೈಸರ್ಗಿಕ ಹಾಗೂ ಆಕಸ್ಮಿಕ ಕಾರಣಗಳಿಂದಾಗಿ ಮೃತ್ಯು ಮತ್ತು ಅಶಕ್ತತೆಯ ಅಪಾಯಗಳಿಗೆ ಒಳ ಪಟ್ಟಿದೆ. ಮಾನವ ಜೀವವು ನಷ್ಟವಾದಾಗ ಅಥವಾ ಓರ್ವ ವ್ಯಕ್ತಿಯು ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ಅಶಕ್ತನಾದಾಗ, ಮನೆತನದ ಆದಾಯವೂ ನಷ್ಟವಾಗುತ್ತದೆ.

- ಮಾನವನ ಜೀವಕ್ಕೆ ಬೆಲೆ ಕಟ್ಟುವುದು ಸಾಧ್ಯವಿಲ್ಲದಿದ್ದರೂ, ಭವಿಷ್ಯದ ವರ್ಷಗಳಲ್ಲಿನ ಆದಾಯದ ನಷ್ಟದ ಆಧಾರದಲ್ಲಿ ಹಣ ರೂಪದ ಒಂದು ಮೊತ್ತನ್ನು ನಿರ್ಧರಿಸಬಹುದಾಗಿದೆ. ಆದ್ದರಿಂದ, ಜೀವ ವಿಮೆಯಲ್ಲಿ ವಿಮಾ ಮೊತ್ತವು (ಅಥವಾ ನಷ್ಟ ಸಂಭವಿಸಿದಾಗ ಗ್ಯಾರಂಟಿಯಾಗಿ ಪಾವತಿಸಲಾಗುವ ಮೊತ್ತ) 'ಲಾಭದ' ರೂಪದಲ್ಲಿರುತ್ತದೆ. ಪಾಲಿಸಿಯ ಕಾಲಾವಧಿಯಲ್ಲಿ ವಿಮೆ ಮಾಡಿಸಿಕೊಂಡವರ ಮೃತ್ಯು ಸಂಭವಿಸಿದಲ್ಲಿ ಅಥವಾ ಅಪಘಾತದ ಕಾರಣ ಅಶಕ್ತತೆ ಉಂಟಾದಲ್ಲಿ ಜೀವ ವಿಮಾ ಉತ್ಪನ್ನಗಳು ಒಂದು ನಿರ್ದಿಷ್ಟ ಮೊತ್ತದ ಹಣವನ್ನು ಒದಗಿಸುತ್ತದೆ.

- ನೀವೇಕೆ ಜೀವ ವಿಮೆಯನ್ನು ಖರೀದಿಸಬೇಕು :

- ನಮಗೆಲ್ಲರಿಗೂ ಈ ಕೆಳಗಿನ ಅಪಾಯಗಳಿವೆ :

  ಬೇಗನೆ ಸಾಯುವುದು

  ಅತಿ ದೀರ್ಘಕಾಲ ಬದುಕುವುದು.

  ಈ ಕೆಳಗಿನ ಕಾರಣಗಳಿಗಾಗಿ ಜೀವ ವಿಮೆಯ ಆವಶ್ಯಕತೆ ಇದೆ :

  ನಿಮ್ಮ ಮೃತ್ಯು ಸಂಭವಿಸಿದಲ್ಲಿ ನಿಮ್ಮ ನಿಕಟ ಕುಟುಂಬಕ್ಕೆ ಸ್ವಲ್ಪ ಆರ್ಥಿಕ ಸಹಾಯವನ್ನು ಖಾತ್ರಿ ಮಾಡುವುದು.

  ನಿಮ್ಮ ಮಕ್ಕಳ ಶೈಕ್ಷಣಿಕ ಮತ್ತು ಇತರ ಆವಶ್ಯಕತೆಗಳಿಗೆ ಹಣ ಒದಗಿಸುವುದು.



  ಭವಿಷ್ಯಕ್ಕಾಗಿ ಉಳಿತಾಯ ಯೋಜನೆಯನ್ನು ಹೊಂದುವುದು ಇದರಿಂದಾಗಿ ಸೇವಾ ನಿವೃತ್ತಿಯ ನಂತರ ನಿಮಗೆ ನಿರಂತರ ಆದಾಯದ ಒಂದು ಮೂಲವಿರುತ್ತದೆ.

  ಗಂಭೀರ ಕಾಯಿಲೆ ಅಥವಾ ಅಪಘಾತದ ಕಾರಣ ನಿಮ್ಮ ಗಳಿಕೆಯು ಕಡಿಮೆಯಾಗುವಾಗ ನಿಮಗೆ ಹೆಚ್ಚುವರಿ ಆದಾಯವಿದೆ ಎಂಬುದನ್ನು ಖಾತ್ರಿ ಮಾಡಿ ಕೊಳ್ಳುವುದು.

  ಇತರ ಆರ್ಥಿಕ ಆವಶ್ಯಕತೆಗಳನ್ನು ಮತ್ತು ಜೀವನ ಶೈಲಿಯ ಆವಶ್ಯಕತೆಗಳನ್ನು ಒದಗಿಸುವುದು.

- ಯಾರಿಗೆ ಜೀವ ವಿಮೆಯ ಆವಶ್ಯಕತೆ ಇದೆ :
  ಮುಖ್ಯತ: ಅವಲಂಬಿತ ಕುಟುಂಬ ಇರುವ ಮತ್ತು ಆದಾಯ ಗಳಿಸುವ ಯಾರೊಬ್ಬರಿಗೂ ಜೀವ ವಿಮೆಯ ಆವಶ್ಯಕತೆ ಇದೆ. ಕುಟುಂಬಕ್ಕೆ ಅವರ ಯೋಗದಾನದ ಆರ್ಥಿಕ ಮೌಲ್ಯದ ಕಾರಣ ಗೃಹಿಣಿಯರಿಗೂ ಜೀವ ವಿಮಾ ಸುರಕ್ಷೆಯ ಆವಶ್ಯಕತೆ ಇದೆ. ಮಕ್ಕಳ ಭವಿಷ್ಯದ ಆದಾಯದ ಸಂಭಾವ್ಯ ಅಪಾಯದ ಕಾರಣ ಅವರನ್ನು ಕೂಡಾ ಜೀವ ವಿಮೆಯ ಸಲುವಾಗಿ ಪರಿಗಣಿಸಬಹುದು.

  ಎಷ್ಟು ಪ್ರಮಾಣದ ಜೀವ ವಿಮೆಯ ಆವಶ್ಯಕತೆ ಇದೆ :

  ನಿಮಗೆ ಆವಶ್ಯಕವಾಗಿರುವ ಜೀವ ವಿಮಾ ಸುರಕ್ಷೆಯ ಮೊತ್ತವು ಈ ಕೆಳಗಿನ ಸಂಗತಿಗಳ ಮೇಲೆ ಅವಲಂಬಿಸಿದೆ :

  ನಿಮಗೆಷ್ಟು ಮಂದಿ ಅವಲಂಬಿತರಿದ್ದಾರೆ

  ನಿಮ್ಮಗೆ ಯಾವುದೇ ಸಾಲ ಅಥವಾ ಮಾರ್ಟೇಗೇಜ್ ಇದೆಯೇ.

  ನಿಮ್ಮ ಕುಟುಂಬಕ್ಕೆ ನೀವು ಯಾವ ಪ್ರಕಾರದ ಜೀವನ ಶೈಲಿಯನ್ನು ಒದಗಿಸಲು ಇಚ್ಛಿಸುತ್ತೀರಿ.

  ನಿಮ್ಮ ಮಕ್ಕಳ ಶಿಕ್ಷಣ ಕ್ಕೆ ನಿಮ್ಮ ಆವಶ್ಯಕತೆ ಎಷ್ಟಿದೆ

  ನಿಮ್ಮ ವಿನಿಯೋಜನಾ ಆವಶ್ಯಕತೆಗಳಾವುದು

  ನಿಮಗೆ ಎಷ್ಟು ಸಾಧ್ಯವಾಗುತ್ತದೆ.

ನಿಮ್ಮ ವಿಮೆಯ ಆವಶ್ಯಕತೆಯನ್ನು ತಿಳಿದುಕೊಳ್ಳಲು ಮತ್ತು ಸರಿಯಾದ ಪ್ರಕಾರ ಸುರಕ್ಷೆಯನ್ನು ಸೂಚಿಸಲು ನೀವು ಓರ್ವ ವಿಮಾ ಏಜೆಂಟರು ಅಥವಾ ಬ್ರೋಕರರ ಸಹಾಯಪಡೆಯಬೇಕು.

- ಜೀವ ವಿಮಾ ಪಾಲಿಸಿಗಳ ಪ್ರಕಾರಗಳು :

**ಟರ್ಮ್ ವಿಮೆ :**

ಟರ್ಮ್ ವಿಮೆಯೊಂದಿಗೆ ನೀವು ಒಂದು ನಿರ್ದಿಷ್ಟ ಸಮಯಾವಧಿಯ ತನಕ ಸಂರಕ್ಷಣೆಯನ್ನು ಆಯ್ಕೆ ಮಾಡಬಹುದು. ಮೃತ್ಯು ಅಥವಾ ಶಾಶ್ವತ ಅಶಕ್ತತೆಯಲ್ಲಿ, ಲಾಭವನ್ನು ನೀಡಲಾಗುವುದಾದರೆ ನಿಮ್ಮ ಅವಲಂಬಿತರಿಗೆ ಲಾಭವನ್ನು ನೀಡಲಾಗುತ್ತದೆ. ಟರ್ಮ್ ವಿಮೆಯಲ್ಲಿ ವಿಮೆ ಮಾಡಿಸಿ ಕೊಂಡಿರುವ ವ್ಯಕ್ತಿಯು ಅವಧಿಯ ಕಾಲಾವಧಿಯಲ್ಲಿ ಬದುಕಿ ಉಳಿದರೆ ಸಾಮಾನ್ಯವಾಗಿ ಯಾವುದೇ ಲಾಭವನ್ನು ನೀಡಲಾಗುವುದಿಲ್ಲ.

**ಹೋಲ್ ಲೈಫ್ ವಿಮೆ**

ಹೋಲ್ ಲೈಫ್ ವಿಮೆಯೊಂದಿಗೆ ನಿಮಗೆ ಜೀವನ ಪರ್ಯಂತದ ಸಂರಕ್ಷಣೆಯ ಖಾತ್ರಿ ಇರುತ್ತದೆ. ಹೋಲ್ ಲೈಫ್ ವಿಮೆಯು ಮೃತ್ಯು ಲಾಭ ವನ್ನು ನೀಡುತ್ತಿದ್ದು ಇದರಿಂದಾಗಿ ನಿಮ್ಮ ಮೃತ್ಯುವಿನ ನಂತರ ಉಂಟಾಗಬಹುದಾದ ಆರ್ಥಿಕ ನಷ್ಟದ ವಿರುದ್ಧ ನಿಮ್ಮ ಕುಟುಂಬಕ್ಕೆ ಸಂರಕ್ಷಣೆಯ ಖಾತ್ರಿ ದೊರಕಬಹುದಾಗಿದೆ. ಇದು ನಿಮ್ಮ ವಾರೀಸುದಾರರಿಗೆ ವರ್ಗಾಯಿಸುವ ಆಸ್ತಿಯನ್ನು ಸೃಷ್ಟಿಸುವ ಉತ್ತಮ ವಿಧಾನವಾಗಿದೆ.

**ಎಂಡೋಮೆಂಟ್ ಪಾಲಿಸಿ**

ಎಂಡೋವ್ಮೆಂಟ್ ಪಾಲಿಸಿಯು ನಿರ್ದಿಷ್ಟ ಪರಿಪಕ್ವತೆಯ ತಾರೀಖಿನೊಂದಿನ ಉಳಿತಾಯದೊಂದಿಗಿನ ವಿಮಾ ಪಾಲಿಸಿಯಾಗಿದೆ. ಈ ಕಾಲಾವಧಿಯಲ್ಲಿ ಮೃತ್ಯು ಅಥವಾ ಅಶಕ್ತತೆಯ ರೂಪದಲ್ಲಿ ದುರಾದೃಷ್ಟಕರ ಘಟನೆಯು ಸಂಭವಿಸಿದರೆ ವಿಮಾ ಮೊತ್ತವನ್ನು ನಿಮ್ಮ ಫಲಾನುಭವಿಗಳಿಗೆ ಪಾವತಿಸಲಾಗುತ್ತದೆ. ನೀವು ಅವಧಿಯಲ್ಲಿ ಬದುಕಿ ಉಳಿದರೆ ಪಾಲಿಸಿಯ ಪರಿಪಕ್ವತೆಯ ಉತ್ಪತ್ತಿಯನ್ನು ಪಾವತಿಸಲಾಗುತ್ತದೆ.



**ಮನೀ ಬ್ಯಾಕ್ ಪ್ಲಾನ್‌ಗಳು ಅಥವಾ ಕ್ಯಾಶ್ ಬ್ಯಾಕ್ ಪ್ಲಾನ್‌ಗಳು :**

ಈ ಪ್ಲಾನ್‌ನಡಿಯಲ್ಲಿ ವಿಮಾ ಮೊತ್ತದ ಒಂದು ನಿರ್ದಿಷ್ಟವಾದ ಪ್ರತಿಶತವನ್ನು ವಿಮೆ ಮಾಡಿದ ವ್ಯಕ್ತಿಗೆ ಸಮಯಾನುಸಾರ ಸರ್ವೈವಲ್ ಲಾಭವಾಗಿ ಮರಳಿಸಲಾಗುತ್ತದೆ. ಅವಧಿಯು ಮುಕ್ತಾಯಗೊಂಡಾಗ ಪರಿಪಕ್ವತೆಯ ಮೌಲ್ಯವಾಗಿ ಬಾಕಿ ಮೊತ್ತವನ್ನು ಪಾವತಿಸಲಾಗುತ್ತದೆ. ಪಾವತಿ ಸರ್ವೈವಲ್ ಲಾಭಗಳನ್ನು ಪರಿಗಣಿಸದೆ ಪಾಲಿಸಿಯ ಕಾಲಾವಧಿಯಲ್ಲಿ ಪೂರ್ಣ ವಿಮಾ ಮೊತ್ತಕ್ಕೆ ಜೀವ ಅಪಾಯದ ಸುರಕ್ಷೆಯು ಇರಬಹುದು.

**ಮಕ್ಕಳ ಪಾಲಿಸಿಗಳು**

ಈ ಪ್ರಕಾರದ ಪಾಲಿಸಿಗಳನ್ನು ಮಕ್ಕಳ ಲಾಭಕ್ಕಾಗಿ ಹೆತ್ತವರ/ಮಕ್ಕಳ ಜೀವದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಇಂತಹ ಪಾಲಿಸಿಗಳಿಂದಾಗಿ, ಮಗು ಜೀವನದಲ್ಲಿ ವಿಭಿನ್ನ ಹಂತಗಳನ್ನು ತಲಪಿದಾಗ ಹಣವನ್ನು ಪಡೆಯುವಂತೆ ಮಾತಾಪಿತರು ಯೋಜನೆ ಹಾಕಬಹುದು. ಪಾಲಿಸಿಯ ಕಾಲಾವಧಿಯಲ್ಲಿ ಹೆತ್ತವರ/ಪ್ರಸ್ತಾವಿತರ ದುರಾದೃಷ್ಟಕರ ಮೃತ್ಯು ಸಂಭವಿಸಿದಲ್ಲಿ ಕೆಲವು ಇನ್‌ಶೂರರು ವೇವರ್ ಆಫ್ ಪ್ರೀಮಿಯಂ ಸೌಲಭ್ಯವನ್ನು ನೀಡುತ್ತಾರೆ.

**ಆನ್ಯುಟಿ (ಪೆನ್ಶನ್) ಪ್ಲಾನ್‌ಗಳು**

ಓರ್ವ ಕರ್ಮಚಾರಿಯು ನಿವೃತ್ತಿ ಹೊಂದಿದಾಗ, ನಿಯಮಿತ ಆದಾಯದ ಅವನ ಆವಶ್ಯಕತೆಯು ಮುಂದುವರಿದರೂ ಅವನು ನಂತರ ವೇತನವನ್ನು ಪಡೆಯುವುದಿಲ್ಲ. ಏಕಗಂಟಿನಿಂದ ಪಾವತಿಸಲಾಗುವ ಪ್ರೊವಿಡೆಂಟ್ ಫಂಡ್ ಮತ್ತು ಗ್ರ್ಯಾಚುಯಿಟಿಯನ್ನು ಒಮ್ಮೆಲೇ ಖರ್ಚು ಮಾಡಲಾಗುತ್ತದೆ ಅಥವಾ ಯೋಗ್ಯ ರೀತಿಯಲ್ಲಿ ವಿನಿಯೋಜಿಸದೆ ಇರುವುದರಿಂದ ಕರ್ಮಚಾರಿಯು ತನ್ನ ನಿವೃತ್ತಿ ನಂತರದ ದಿನಗಳಲ್ಲಿ ನಿಯಮಿತ ಆದಾಯವನ್ನ ಪಡೆಯಲಾರದವನಾಗುತ್ತಾನೆ. ಪೆನ್ಶನ್, ನಿವೃತ್ತಿ ನಂತರದ ದಿನಗಳಲ್ಲಿ ನಿಯಮಿತ ಆದಾಯದ ಮುನ್ನೇರ್ಪಾಡಿನ ಸೂಕ್ತವಿಧಾನವಾಗಿದೆ ಏಕೆಂದರೆ, ಪ್ರಯೋಜನವು ನಿಯಮಿತ ಆದಾಯದ ರೂಪದಲ್ಲಿರುತ್ತದೆ. ನಾವು ದುಡಿಯುವ ಸಮಯದಲ್ಲಿ

ನಿಯಮಿತ ಆದಾಯ ಇರುವಾಗ, ಇಳಿ ವಯಸ್ಸಿನ ಕಾಳಜಿ ವಹಿಸಲು ಕ್ರಮಕೈಗೊಳ್ಳುವುದು ಜಾಣತನವಾಗಿದೆ. ಮುಪ್ಪಿನ ಕಾಲಾವಧಿಯಲ್ಲಿ ಆರ್ಥಿಕ ಸ್ವಾತಂತ್ರ್ಯವು ಪ್ರತಿಯೊಬ್ಬರಿಗೂ ಆವಶ್ಯಕವಾಗಿದೆ.

ಎರಡು ಪ್ರಕಾರಗಳ ಆನ್ಯುಟಿಗಳಿವೆ (ಪೆನ್ಶನ್ ಪ್ಲಾನ್‌ಗಳು)

- ತಕ್ಷಣ ಆನ್ಯುಟಿ
  ತಕ್ಷಣ ಆ್ಯನ್ಯುಯಿಟಿಯಲ್ಲಿ ವಿಮಾ ಕಂಪೆನಿಯಿಂದ ಆನ್ಯುಟಿ ಪಾವತಿಯು ಕೂಡಲೇ ಆರಂಭವಾಗುತ್ತದೆ. ತಕ್ಷಣ ಆನ್ಯುಟಿಗಾಗಿ ಖರೀದಿ ಬೆಲೆಯನ್ನು (ಪ್ರೀಮಿಯಂ) ಒಂದೇ ಕಂತಿನಲ್ಲಿ ಮಾತ್ರ ಏಕಗಂಟಿನಲ್ಲಿ ಪಾವತಿಸಬೇಕು.

- ಡೆಫರ್ಡ್ ಆನ್ಯುಟಿ
  ಡೆಫರ್ಡ್ ಆನ್ಯುಟಿ ಪಾಲಿಸಿಯಡಿಯಲ್ಲಿ ವ್ಯಕ್ತಿಯು ವೆಸ್ಟಿಂಗ್ ವಯಸ್ಸು/ವೆಸ್ಟಿಂಗ್ ತಾರೀಖಿನ ತನಕ ನಿಯಮಿತ ಪಾವತಿಯನ್ನು ಮಾಡುತ್ತಿರುತ್ತಾನೆ. ಆವನಿಗೆ ಒಂದೇ ಪ್ರೀಮಿಯಂ ಸಂದಾಯ ಮಾಡುವ ಆಯ್ಕೆಯೂ ಇರುತ್ತದೆ. ಫಂಡ್, ಬಡ್ಡಿಯೊಂದಿಗೆ ಸಂಗ್ರಹಗೊಳ್ಳುತ್ತದೆ ಮತ್ತು ವೆಸ್ಟಿಂಗ್ ತಾರೀಖಿನಂದು ಫಂಡ್ ಲಭ್ಯವಿರುತ್ತದೆ. ಫಂಡ್‌ಗಳ ವಿನಿಯೋಜನೆಯ ಕಾಳಜಿಯನ್ನು ವಿಮಾ ಕಂಪೆನಿಯು ವಹಿಸುತ್ತದೆ ಮತ್ತು ವೆಸ್ಟಿಂಗ್ ವಯಸ್ಸು/ತಾರೀಖಿನಲ್ಲಿ ಪಾಲಿಸಿ ಧಾರಕರಿಗೆ ಒಟ್ಟು ಫಂಡ್‌ನ 1/3 ನ್ನು ಕರಮುಕ್ತವಾಗಿ ನಗದೀಕರಿಸುವ ಆಯ್ಕೆ ಇದೆ. ಬಾಕಿ 2/3 ಮೊತ್ತವನ್ನು ಆನುಟೆಂಟ್‌ರಿಗಾಗಿ ಆ್ಯನುಯಿಟಿ (ಪೆನ್ಶನ್) ಯನ್ನು ಖರೀದಿಸಲು ಉಪಯೋಗಿಸಲಾಗುತ್ತದೆ.

**ಯೂನಿಟ್ ಲಿಂಕ್‌ಡ್ ವಿಮಾ ಪಾಲಿಸಿ**

ಯೂನಿಟ್ ಲಿಂಕ್‌ಡ್ ವಿಮಾ ಪಾಲಿಸಿಗಳು (ಯುಲಿಪ್‌ಗಳು) ವಿನಿಯೋಜನೆ ಮತ್ತು ಸಂರಕ್ಷಣೆಯ ಸಂಯೋಜಕವನ್ನು ನೀಡುತ್ತವೆ ಮತ್ತು ನಿಮ್ಮ ಪ್ರೀಮಿಯಂನ್ನು ಹೇಗೆ ಉಪಯೋಗಿಸಬೇಕೆಂಬ ಬಗ್ಗೆ ನಿಮಗೆ ಪರಿವರ್ತನೀಯತೆ ಮತ್ತು ಆಯ್ಕೆಯನ್ನು ನೀಡುತ್ತದೆ. ಯೂನಿಟ್ ಲಿಂಕ್‌ಡ್ ಪ್ಲಾನ್‌ಗಳಲ್ಲಿ ನೀವೇ ವಿನಿಯೋಜಕರಾಗಿರುವುದರಿಂದ ವಿನಿಯೋಜನಾ ರಿಸ್ಕ್ ಪೋರ್ಟ್‌ಫೋಲಿಯೋವನ್ನು ನೀವೇ ಭರಿಸಿಕೊಳ್ಳುತ್ತೀರಿ.



ಪಾಲಿಸಿಯು ನಿಮಗೆ ನೀವು ವಿನಿಯೋಜಿಸಬಹುದಾದ ಫಂಡ್‌ಗಳ ಆಯ್ಕೆಯನ್ನು ಒದಗಿಸುತ್ತದೆ. ಪಾಲಿಸಿಯ ಕಾಲಾವಧಿಯಲ್ಲಿ ಬೇರೆ ಬೇರೆ ಫಂಡ್‌ಗಳ ನಡುವೆ ಸ್ವಿಚ್ ಮಾಡುವ ಪರಿವರ್ತನೀಯತೆಯೂ ನಿಮಗಿದೆ. ಯುಲಿಪ್‌ನ ಮೌಲ್ಯವು ನೀವು ವಿನಿಯೋಜಿಸಿದ ಫಂಡ್‌ನಲ್ಲಿನ ಯುನಿಟ್‌ನ ಪ್ರಸಕ್ತ ಮೌಲ್ಯದೊಂದಿಗೆ ಜೋಡಿಕೊಂಡಿದ್ದು, ಇದು ಫಂಡ್‌ನ ಕಾರ್ಯಾಚರಣೆಯನ್ನು ಅವಲಂಬಿಸಿದೆ. ಮೃತ್ಯು ಸಂಭವಿಸಿದಲ್ಲಿ ಅಥವಾ ಶಾಶ್ವತ ಅಶಕ್ತತೆ ಉಂಟಾದಲ್ಲಿ ಪಾಲಿಸಿಯು ವಿಮಾ ಮೊತ್ತವನ್ನು (ನೀವು ಪಡೆದಿರುವ ಸುರಕ್ಷೆಯಷ್ಟರ ಪ್ರಮಾಣದಂತೆ) ಒದಗಿಸುತ್ತಿದ್ದು, ಒಮ್ಮೆಲೆ ಆಗುವ ಆರ್ಥಿಕ ನಷ್ಟದಿಂದಾಗಿ ನಿಮ್ಮ ಕುಟುಂಬಕ್ಕೆ ರಕ್ಷಣೆ ದೊರಕಬಹುದೆಂಬ ಸಮಾಧಾನ ನಿಮಗಿರುತ್ತದೆ. ಯೂಲಿಪ್‌ನಲ್ಲಿ ವಿಭಿನ್ನ ಪ್ರಮಾಣದ ರಿಸ್ಕ ಮತ್ತು ಪ್ರತಿ ಫಲಗಳಿರುತ್ತವೆ. ಯೂನಿಟ್ ಲಿಂಕ್‌ಡ್ ಪಾಲಿಸಿಗಳಿಗೆ ವಿಭಿನ್ನ ಶುಲ್ಕಗಳು ಅನ್ವಯಿಸುತ್ತವೆ ಮತ್ತು ಪ್ರೀಮಿಯಂನಲ್ಲಿನ ಬಾಕಿ ಮೊತ್ತವನ್ನು ಮಾತ್ರ ನಿಮ್ಮ ಆಯ್ಕೆಯ ಫಂಡ್/ಫಂಡ್‌ಗಳಲ್ಲಿ ವಿನಿಯೋಜಿಸಲಾಗುತ್ತದೆ. ನೀವು ಮಾಡಬೇಕಾದ ಶುಲ್ಕಗಳ ಒಟ್ಟು ಮೊತ್ತದ ಬಗ್ಗೆ ತಿಳಿದುಕೊಳ್ಳಲು ನಿಮ್ಮ ಇನ್‌ಶೂರರ್ ಅಥವಾ ಏಜೆಂಟರು ಅಥವಾ ಬ್ರೋಕರರಿಗೆ ಪ್ರಶ್ನೆಗಳನ್ನು ಕೇಳುವುದು ಮುಖ್ಯವಾಗಿದೆ. ಯೂಲಿಪ್ ಪಾಲಿಸಿಯನ್ನು ಖರೀದಿಸುವ ನಿರ್ಣಯ ಕೈಗೊಳ್ಳುವ ಮೊದಲು ನಿಮ್ಮ ಅಪಾಯದ ಕ್ಷಮತೆ ಮತ್ತು ವಿನಿಯೋಜನಾ ಕ್ಷಿತಿಜದ ಮೌಲ್ಯಾಂಕನ ಮಾಡುವುದು ಮುಖ್ಯವಾಗಿದೆ. ಅಲ್ಲದೆ ಲಾಕ್ ಇನ್‌ಅವಧಿ, ಸರಂಡರ್ ಮೌಲ್ಯ ಸರಂಡರ್ ಶುಲ್ಕ ಇತ್ಯಾದಿಗಳ ನ್ನೊಳಗೊಂಡು ಪಾಲಿಸಿಯ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳಲು ನೀವು ಪಾಲಿಸಿಯ ನಿಯಮ ಮತ್ತು ನಿಬಂಧನೆಗಳನ್ನು ಕೂಡ ಎಚ್ಚರಿಕೆಯಿಂದ ಓದಲೇಬೇಕು.

ಈ ಮೇಲೆ ನಮೂದಿಸಲಾದ ಎಲ್ಲಾ ಪ್ರಕಾರಗಳ ಪ್ಲಾನ್‌ಗಳನ್ನು ಯೂಲಿಪ್ ಪ್ಲಾನ್‌ಗಳಡಿಯಲ್ಲಿ ನೀಡಬಹುದು.

## 3. ಜೀವ ವಿಮೆಯ ಬಗ್ಗೆ ಆಗಾಗ ಕೇಳಲಾಗುವ ಪ್ರಶ್ನೆಗಳು

### ಸಾಂಪ್ರದಾಯಿಕ ಜೀವ ವಿಮೆ

**ಪ್ರ.** ನಾನೊಂದು ಪಾಲಿಸಿಯನ್ನು ಖರೀದಿಸಲು ನಿರ್ಧರಿಸುವ ಮೊದಲು ನಾನು ಏನನ್ನು ನೋಡಬೇಕು?

**ಉ.** ನೀವುಪ್ರತಿ ಫಲದ ಗ್ಯಾರಂಟಿ ಇದೆಯೇ ಇಲ್ಲವೇ ಲಾಕ್ ಇನ್ ಅವಧಿ ಎಷ್ಟಿದೆ, ಸಂದಾಯ ಮಾಡಬೇಕಾದ ಪ್ರೀಮಿಯಂನ ವಿವರಗಳು, ಪ್ರೀಮಿಯಂ ಪಾವತಿಸಲು ತಪ್ಪಿದರೆ ಅದರ ಪರಿಣಾಮವೇನು, ಪುನಶ್ಚೇತನದ ನಿರ್ಬಂಧಗಳಾವುವು, ಪಾಲಿಸಿಯ ಅವಧಿಗಳಾವುವು, ಕಡಿತ ಮಾಡಲಾಗುವ ಶುಲ್ಕಗಳಾವುವು, ಸಾಲ ಲಭ್ಯವಿದೆಯೇ ಇತ್ಯಾದಿಗಳನ್ನು ನೀವು ಪರಿಶೀಲಿಸಿಕೊಳ್ಳಲೇಬೇಕು ಮತ್ತು ನೋಡಲೇಬೇಕು.

**ಪ್ರ.** ಪ್ರಸ್ತಾವ ಮತ್ತು ಅದರಲ್ಲಿ ಮಾಡಲಾದ ಹೊರಗೆಡಹುವಿಕೆಯ ಪ್ರಾಮುಖ್ಯತೆ ಏನು?

**ಉ.** ಪ್ರಸ್ತಾವದಲ್ಲಿ ಮಾಡಲಾದ ಹೊರಗೆಡಹುವಿಕೆಯು ಪಾಲಿಸಿಯ ಅಂಡರ್ ರೈಟಿಂಗ್‌ನ ಆಧಾರವಾಗಿದೆ ಮತ್ತು ಆದ್ದರಿಂದ ಯಾವುದೇ ತಪ್ಪು ಹೇಳಿಕೆಗಳು ಅಥವಾ ಹೊರಗೆಡಹುವಿಕೆಗಳು ದಾವೆಯು ತಿರಸ್ಕರಿಸುವುದಕ್ಕೆ ಕಾರಣವಾಗಬಹುದು.

**ಪ್ರ.** ಜೀವ ವಿಮೆಯಲ್ಲಿ ಸಲ್ಲಿಸುವುದು ಅವಶ್ಯಕವಾದ ವಿಶೇಷ ವೈದ್ಯಕೀಯ ವರದಿಗಳಾವುವು ?

**ಉ.** ನಿರ್ದಿಷ್ಟವಾದ ಕೆಲವು ಪ್ರಸ್ತಾವಗಳ ಪ್ರಸಂಗದಲ್ಲಿ, ಪ್ರವೇಶದಲ್ಲಿ ವಯಸ್ಸು ಪರಿಪಕ್ವತೆಯಲ್ಲಿ ವಯಸ್ಸು ವಿಮಾ ಮೊತ್ತ ಕುಟುಂಬ ಹಿನ್ನೆಲೆ ಮತ್ತು ವೈಯಕ್ತಿಕ ಹಿನ್ನೆಲೆಯನ್ನು ಅವಲಂಬಿಸಿ ಅಪಾಯದ ಪರಿಗಣನೆಗಾಗಿ ವಿಶೇಷ ವೈದ್ಯಕೀಯ ವರದಿಗಳು ಆವಶ್ಯಕವಾಗಬಹುದು. ಉದಾ ಪ್ರಸ್ತಾವಿತರು ಅಧಿಕ ತೂಕದವರಾಗಿದ್ದರೆ, ಇಲೆಕ್ಟ್ರೊ ಕಾರ್ಡಿಯೊಗ್ರಾಮ್, ಗ್ಲೂಕೋಸ್ ಟಾಲರೆನ್ಸ್ ಪರೀಕ್ಷೆ ಮುಂತಾದ ವಿಶೇಷ ವರದಿಗಳ ಆವಶ್ಯಕತೆ ಇರಬಹುದು ಅಂತೆಯೇ ಕಡಿಮೆ ದೇಹ ತೂಕ ಇರುವ ಪ್ರಸ್ತಾವಿತರಿಗಾಗಿ ಎದೆಯ ಎಕ್ಸ್-ರೇ ಮತ್ತು ಶ್ವಾಸಕೋಶದ ವರದಿಯ ಆವಶ್ಯಕತೆ ಇರಬಹುದು.



**ಪ್ರ.** ಸಾಂಪ್ರದಾಯಿಕ ಜೀವ ವಿಮೆಯಲ್ಲಿ ಪೈಯ್ಡ್ ಅಪ್ ಮೌಲ್ಯ ಎಂದರೇನು ?

**ಉ.** ಒಂದು ನಿಗದಿತ ಅವಧಿಯ ತನಕ ಅಥವಾ ಅದರ ನಂತರ ಪ್ರೀಮಿಯಂನ್ನು ಸಂದಾಯ ಮಾಡಿದ ನಂತರ ಮತ್ತು ನಂತರದ ಪ್ರೀಮಿಯಂಗಳನ್ನು ಸಂದಾಯ ಮಾಡದಿದ್ದರೆ ವಿಮಾ ಮೊತ್ತವನ್ನು ಪೂರ್ಣ ವಿಮಾ ಮೊತ್ತದ ಒಂದು ದಾಮಾಶಯದ ಮೊತ್ತಕ್ಕೆ ಕಡಿಮೆ ಮಾಡಲಾಗಿ, ಇದು ವಾಸ್ತವಿಕವಾಗಿ ಸಂದಾಯ ಮಾಡಲಾದ ಪ್ರೀಮಿಯಂಗಳ ಸಂಖ್ಯೆಯು ಪಾಲಿಸಿಯಲ್ಲಿ ನಿರ್ದಿಷ್ಟಪಡಿಸಲಾದ ಮೂಲ ಒಟ್ಟು ಪ್ರೀಮಿಂನಂತೆ ಪೂರ್ಣ ವಿಮಾ ಮೊತ್ತಕ್ಕೆ ಅದೇ ದಾಮಾಶಯದಂತಿರುತ್ತದೆ. ಉದಾಹರಣೆಗಾಗಿ, ವಿಮಾ ಮೊತ್ತವು 1 ಲಕ್ಷವಾಗಿದ್ದು ಮತ್ತು ಸಂದಾಯ ಮಾಡಬೇಕಾದ ಒಟ್ಟು ಪ್ರೀಮಿಯಂ 20 ಎಂದಾದರೆ (20 ವರ್ಷಗಳ ಪಾಲಿಸಿ, ಪ್ರೀಮಿಯಂ ಪಾವತಿ ವಿಧಾನ ವಾರ್ಷಿಕ ಎಂದು ಊಹಿಸಲಾಗಿದೆ) ಮತ್ತು 10 ವಾರ್ಷಿಕ ಪ್ರೀಮಿಯಂ ಸಂದಾಯ ಮಾಡಿದ ನಂತರ ಡಿಫಾಲ್ಟ್ ಉಂಟಾದರೆ, ಪಾಲಿಸಿಯು 50,000 ಪೈಯ್ಡ್ ಅಪ್‌ನ್ನು ಪಡೆಯುತ್ತದೆ ಮೌಲ್ಯ = ಸಂದಾಯ ಮಾಡಿದ ಪ್ರೀಮಿಯಂಗಳ ಸಂಖ್ಯೆ/ಸಂದಾಯ ಮಾಡಬೇಕಾದ ಪ್ರೀಮಿಯಂಗಳ ಸಂಖ್ಯೆ ಎಸ್.ಎ=10/20x 100000=50000/- 011 ನೇ ಪ್ರೀಮಿಯಂ ಪಾವತಿ ತಾರೀಖನ್ನು ಹೊರತು ಪಡಿಸಿ ಪಾಲಿಸಿಯು ಈ ಮೊದಲಿನಂತೆ ಪರಿಣಾಮಕಾರಿಯಾಗಿದೆ ಎಂದರ್ಥವಾಗಿದ್ದು ವಿಮಾ ಮೊತ್ತ ಮೂಲ 1,00,000ದ ಬದಲಾಗಿ 50,000 ಆಗಿರುತ್ತದೆ. ಈ ವಿಮಾ ಮೊತ್ತಕ್ಕೆ ಪಾಲಿಸಿಯು ರದ್ದಾಗುವ ಮೊದಲು ಸಂಚಯಿತ ಬೋನಸನ್ನು ಕೂಡಾ ಸೇರಿಸಲಾಗುತ್ತದೆ. ಉದಾಹರಣೆಗಾಗಿ, ರದ್ದಾಗುವ. ತಾರಿಖಿನ ತನಕ ಸಂಚಯಗೊಂಡ ಬೋನಸ್ 35,000/- ಆಗಿದ್ದರೆ ಒಟ್ಟು ಪೈಯ್ಡ್ ಅಪ್ ಮೌಲ್ಯವು 50,000 + 35000 = 85,000 ಆಗುತ್ತದೆ.

**ಪ್ರ.** ಸಾಂಪ್ರದಾಯಿಕ ಜೀವ ವಿಮೆಯಲ್ಲಿ ಸರಂಡರ್ ಮೌಲ್ಯವನ್ನು ಹೇಗೆ ಲೆಕ್ಕ ಮಾಡಲಾಗುತ್ತದೆ ?

**ಉ.** ಸರಂಡರ್ ಮೌಲ್ಯವನ್ನು ಈ ಪೈಯ್ಡ್ ಅಪ್ ಮೌಲ್ಯದ ಪ್ರತಿಶತದಂತೆ ಅನುವು ಮಾಡಲಾಗುತ್ತದೆ. ಸರಂಡರ್ ಮೌಲ್ಯವನ್ನು ಸರಂಡರ್ ಮೌಲ್ಯ ಫ್ಯಾಕ್ಟರ್‌ನಂತೆ ಲೆಕ್ಕ ಮಾಡಲಾಗುತ್ತಿದು ಇದು ಸಂದಾಯ ಮಾಡಲಾದ ಪ್ರೀಮಿಯಂಗಳನ್ನು ಮತ್ತು ಕಳೆದು ಹೋದ ಕಾಲಾವಧಿಯ ಮೇಲೆ ಅವಲಂಬಿಸಿದೆ.

**ಪ್ರ. ಸಾಂಪ್ರದಾಯಿಕ ಜೀವ ವಿಮಾಪಾಲಿಸಿಗಳಡಿಯಲ್ಲಿ ಪಾಲಿಸಿಯ ಮೇಲೆ ಸಾಲವನ್ನು ಹೇಗೆ ಲೆಕ್ಕ ಮಾಡ ಲಾಗುತ್ತದೆ ?**

ಉ. ಪಾಲಿಸಿಯ ನಿಬಂಧನೆಗಳಲ್ಲಿ ಸಾಲಕ್ಕೆ ಅನುಮತಿ ಇದ್ದರೆ ಸರಂಡರ್ ಮೌಲ್ಯದ ಪ್ರತಿ ಶತದಂತೆ ಸಾಲವನ್ನು ಮಂಜೂರು ಮಾಡಲಾಗುತ್ತದೆ.

**ಪ್ರ. ಪರಿಪಕ್ವತೆಯ ದಾವೆಗಾಗಿ ಸಲ್ಲಿಸಬೇಕಾದ ಆವಶ್ಯಕತೆಗಳಾವುವು ?**

ಉ. ಸಾಮಾನ್ಯವಾಗಿ ಪಾಲಿಸಿಯ ಪರಿಪಕ್ವತೆಯ ತಾರೀಖಿನಿಂದ ಕನಿಷ್ಠ 2 ರಿಂದ 3 ತಿಂಗಳು ಮುಂಚಿತವಾಗಿ ವಿಮಾ ಕಂಪೆನಿಯು ಪಾವತಿ ಸಲಾಗುವ ದಾವೆ ಮೊತ್ತದೊಂದಿಗೆ ಡಿಸ್ಚಾರ್ಜ್ ವೋಚರನ್ನು ಲಗ್ತೀಕರಿಸಿ ಪಾಲಿಸಿ ಧಾರಕರಿಗೆ ಸೂಚನಾ ಪತ್ರವನ್ನು ಕಳುಹಿಸಿ ಕೊಡುತ್ತದೆ. ಪಾಲಿಸಿ ಬಾಂಡ್ ಮತ್ತು ಸಹಿ ಮಾಡಿ ಸಾಕ್ಷಿ ಇರುವ ಡಿಸ್ಚಾರ್ಜ್ ವೋಚರನ್ನು ಕೂಡಲೇ ವಿಮಾ ಕಂಪೆನಿಗೆ ಮರಳಿಸಬೇಕಾಗಿದ್ದು ಇದರಿಂದಾಗಿ ಹಣ ಪಾವತಿ ಮಾಡಲು ವಿಮಾ ಕಂಪೆನಿಗೆ ಸಾಧ್ಯವಾಗುತ್ತದೆ. ಒಂದು ವೇಳೆ ಪಾಲಿಸಿಯನ್ನು ಇತರ ಯಾವುದೇ ವ್ಯಕ್ತಿಗೆ ಅಸ್ಸೈನ್ ಮಾಡಲಾಗಿದ್ದರೆ, ದಾವೆ ಮೊತ್ತವನ್ನು ಡಿಸ್ಚಾರ್ಜ್‌ನ್ನು ನೀಡುವ ಅಸ್ಸೈನಿಗೆ ಮಾತ್ರ ನೀಡಲಾಗುತ್ತದೆ.

**ಪ್ರ. ಸೆಟ್ಲ್‌ಮೆಂಟ್ ಆಯ್ಕೆಗಳೆಂದರೆ ಏನು ?**

ಉ. ಸೆಟ್ಲ್‌ಮೆಂಟ್ ಆಯ್ಕೆ ಎಂದರೆ ಪರಿಪಕ್ವತೆಯ ಉತ್ಪತ್ತಿಯನ್ನು ವ್ಯಾಖ್ಯಾನಿತ ರೀತಿಯಲ್ಲಿ (ನಿಯಮ ಮತ್ತು ನಿಬಂಧನೆಗಳನ್ನು ಪಮಂಚಿತವಾಗಿ ಒಪ್ಪಂದದ ಆರಂಭದಲ್ಲೇ ನಿರ್ದಿಷ್ಟ ಪಡಿಸಲಾಗುತ್ತದೆ) ಪಡೆಯಲು ಪಾಲಿಸಿಧಾರಕರಿಗೆ ಲಭ್ಯಗೊಳಿಸಲಾದ ಸೌಲಭ್ಯವಾಗಿದೆ.

**ಪ್ರ. ಪಾಲಿಸಿಯು ಚಾಲನೆಯಲ್ಲಿರುವಾಗ ವಿಮೆ ಮಾಡಿಸಿಕೊಂಡವರ ಮೃತ್ಯು ಸಂಭವಿಸಿದಲ್ಲಿ ಸಾಮಾನ್ಯವಾಗಿ ಯಾವ ದಸ್ತಾವೇಜುಗಳನ್ನು ಸಲ್ಲಿಸಬೇಕು.**

ಉ. ಸಾಮಾನ್ಯವಾಗಿ ಆವಶ್ಯಕವಾದ ಮೂಲ ದಸ್ತಾವೇಜುಗಳೆಂದರೆ ಮೃತ್ಯು ಪತ್ರ, ದಾವೆ ಫಾರ್ಮ್ ಮತ್ತು ಪಾಲಿಸಿ ಬಾಂಡ್ ಮೆಡಿಕಲ್ ಎಟೆಂಡೆಂಟರ ಪ್ರಮಾಣ ಪತ್ರ, ಆಸ್ಪತ್ರೆಯ ಪ್ರಮಾಣಪತ್ರ, ಉದ್ಯೋಗ ದಾತರ ಪ್ರಮಾಣ ಪತ್ರ, ಪೊಲೀಸ್ ತನಿಖಾ ವರದಿ, ಪೋಸ್ಟ್ ಮಾರ್ಟಮ್ ವರದಿ ಇತ್ಯಾದಿ ಇತರ ದಸ್ತಾವೇಜುಗಳನ್ನು ಅನ್ವಯವಾಗುವಂತೆ ಕೇಳಬಹುದು. ದಾವೆಯ ಆವಶ್ಯಕತೆಗಳನ್ನು



Bima Bemisaal

ಸಾಮಾನ್ಯವಾಗಿ ಪಾಲಿಸಿ ಬಾಂಡ್‌ನಲ್ಲಿ ತಿಳಿಸಲಾಗಿರುತ್ತದೆ.

<u>ಯೂನಿಟ್ ಲಿಂಕ್‌ಡ್ ವಿಮಾ ಪಾಲಿಸಿಗಳು (ಯೂಲಿಪ್)</u>

**ಪ್ರ. ಯೂನಿಟ್ ಲಿಂಕ್ಡ್ ಪಾಲಿಸಿಗಳಲ್ಲಿ ಸರಂಡರ್ ಮೌಲ್ಯವನ್ನು ಹೇಗೆ ಲೆಕ್ಕ ಮಾಡಲಾಗುತ್ತದೆ ?**

ಉ. ಸರಂಡರ್ ಮೌಲ್ಯವನ್ನು ಸರಂಡರ್ ಶುಲ್ಕವನ್ನು ಕಳೆದು ಫಂಡ್ ಮೌಲ್ಯದಲ್ಲಿ ಸಾಮಾನ್ಯವಾಗಿ ದರ್ಶಿಸಲಾಗುತ್ತದೆ.

**ಪ್ರ. ಸರಂಡರ್‌ಗಳು, ಪರಿಪಕ್ವತೆಯ ದಾವೆ, ಸ್ವಿಚ್ ಇತ್ಯಾದಿಗಳಿಗೆ ಎನ್‌ಎವಿಯನ್ನು ಪಡೆಯುವ ವಿಧಾನ ಯಾವುದು ?**

ಉ. ಇನ್‌ಶೂರರಿಂದ ಸಾಯಂಕಾಲ ಗಂಟೆ 3.00ರ ತನಕ ಸ್ವೀಕರಿಸಲ್ಪಟ್ಟ ಊರ್ಜಿತ ಅರ್ಜಿಗಳ ಸಂದರ್ಭದಲ್ಲಿ (ಉದಾ ಸರಂಡರ್, ಪರಿಪಕ್ವತೆಯ ದಾವೆ, ಸ್ವಿಚ್ ಇತ್ಯಾದಿ) ಅದೇ ದಿನದ ಅಂತ್ಯದ ಎನ್‌ಎವಿಯು ಅನ್ವಯವಾಗುತ್ತದೆ.

ಇನ್‌ಶೂರರಿಂದ ಸಾಯಂಕಾಲ ಗಂಟೆ 3.00ರ ನಂತರ ಸ್ವೀಕರಿಸಲ್ಪಟ್ಟ ಉರ್ಜಿತ ಅರ್ಜಿಗಳ ಸಂದರ್ಭದಲ್ಲಿ (ಉದಾ ಸರಂಡರ್, ಪರಿಪಕ್ವತೆಯ ದಾವೆ, ಸ್ವಿಚ್ ಇತ್ಯಾದಿ) ಮರು ದಿನದ ವ್ಯಾಪಾರದ ಎನ್‌ಎವಿಯು ಅನ್ವಯವಾಗುತ್ತದೆ.

**ಪ್ರ. ಯೂನಿಟ್ ಫಂಡ್ ಎಂದರೇನು ?**

ಉ. ಎಲ್ಲಾ ಶುಲ್ಕಗಳ ಸಲುವಾಗಿ ಮತ್ತು ಪಾಲಿಸಿಧಾರಕರಿಂದ ಆಯ್ಕೆ ಮಾಡಲಾದಂತೆ ನಿರ್ದಿಷ್ಟ ಫಂಡ್‌ನಲ್ಲಿನ ಎಲ್ಲಾ ಪಾಲಿಸಿಗಳಡಿಯಲ್ಲಿ ಅಪಾಯದ ಸುರಕ್ಷೆಗಾಗಿ ಎಲ್ಲಾ ಶುಲ್ಕಗಳನ್ನೂ ಕಡಿತ ಮಾಡಿ ಪ್ರೀಮಿಯಂಗಳ ಗೊತ್ತುಮಾಡಲಾದ (ವಿನಿಯೋಜಿಸಿದ) ಪ್ರಮಾಣ ವನ್ನು ಯೂನಿಟ್‌ಫಂಡಾಗಿ ರೂಪಿಸಲು ಒಂದು ಗೂಡಿಸಲಾಗುತ್ತದೆ.

**ಪ್ರ. ಯೂನಿಟ್ ಎಂದರೇನು ?**

ಉ. ಇದು ಯೂನಿಟ್ ಲಿಂಕಡ್ ಪಾಲಿಸಿಯಲ್ಲಿ ಫಂಡ್‌ನ ಒಂದು ಘಟಕವಾಗಿದೆ.

**ಪ್ರ. ಯೂಲಿಪ್‌ಗಳು ಯಾವ ಪ್ರಕಾರಗಳ ಫಂಡ್‌ಗಳನ್ನು ನೀಡುತ್ತವೆ?**

ಉ. ಹೆಚ್ಚಿನ ಇನ್‌ಶೂರರು ಓರ್ವನ ವಿನಿಯೋಜನಾ ಉದ್ದೇಶ, ಅಪಾಯವನ್ನು ಸಹಿಸುವ ಕ್ಷಮತೆ ಮತ್ತು ಸಮಯ ಕ್ಷಿತಿಜಕ್ಕೆ

ಸೂಕ್ತವಾಗುವಂತೆ ವಿಭಿನ್ನ ಶ್ರೇಣಿಯ ಫಂಡ್‌ಗಳನ್ನು ನೀಡುತ್ತದೆ. ಬೇರೆ ಬೇರೆ ಫಂಡ್‌ಗಳು ಬೇರೆ ಬೇರೆ ಅಪಾಯದ ಪ್ರೊಫ್ಯಾಲ್‌ಗಳನ್ನು ಹೊಂದಿದೆ. ಪ್ರತಿಫಲದ ಸಾಮರ್ಥ್ಯವೂ ಫಂಡ್‌ನಿಂದ ಫಂಡ್‌ಗೆ ಬೇರೆ ಬೇರೆಯಾಗಿರುತ್ತದೆ.

**ಪ್ರ. ಯೂಲಿಪ್‌ನಲ್ಲಿ ವಿನಿಯೋಜನೆಯ ಪ್ರತಿಫಲಗಳ ಖಾತ್ರಿ ಉಂಟೇ ?**

ಉ. ಯೂಲಿಪ್‌ನಿಂದ ವಿನಿಯೋಜನೆಯ ಪ್ರತಿಫಲಗಳ ಗ್ಯಾರಂಟಿ ಇರಲಿಕ್ಕಿಲ್ಲ. "ಯೂನಿಟ್ ಲಿಂಕ್ಡ್ ಉತ್ಪನ್ನಗಳಲ್ಲಿ/ ಪಾಲಿಸಿಗಳಲ್ಲಿ ವಿನಿಯೋಜನಾ ಪೋರ್ಟ್‌ಫೋಲಿಯೊದಲ್ಲಿನ ವಿನಿಯೋಜನಾ ರಿಸ್ಕ್ ಅಪಾಯವನ್ನು ಪಾಲಿಸಿ ಧಾರಕರೇ ಭರಿಸಿಕೊಳ್ಳುತ್ತಾರೆ" ಆಯ್ಕೆ ಮಾಡಲಾದ ಯೂನಿಟ್ ಲಿಂಕ್ಡ್ ಫಂಡ್(ಗಳ)ನ ಕಾರ್ಯಾಚರಣೆಯನ್ನು ಅವಲಂಬಿಸಿ ಪಾಲಿಸಿಧಾರಕರು ಅವನ/ಅವಳ ವಿನಿಯೋಜನೆಗಳ ಮೇಲೆ ಗಳಿಕೆಯನ್ನು ಮಾಡಬಹುದು ಅಥವಾ ನಷ್ಟವನ್ನು ಅನುಭವಿಸಬಹುದು. ಫಂಡ್‌ನ ಹಿಂದಿನ ಪ್ರತಿಫಲಗಳು ಫಂಡ್‌ನ ಭವಿಷ್ಯದ ಕಾರ್ಯಾಚರಣೆಯ ಸೂಚಕವಾಗಿರಬೇಕಾಗಿಲ್ಲ ಎಂಬುದನ್ನು ಕೂಡಾ ಗಮನಿಸಬೇಕು.

| ಈ ಕೆಳಗಿನವುಗಳು, ಅವುಗಳ ಅಪಾಯದ ಗುಣಧರ್ಮಗಳೊಂದಿಗೆ ಉಪಲಬ್ಧವಿರುವ ಕೆಲವು ಸಾಮಾನ್ಯ ಪ್ರಕಾರದ ಫಂಡ್‌ಗಳಾಗಿವೆ. ಸಾಮಾನ್ಯ ವಿವರಣೆ | ವಿನಿಯೋಜನೆಗಳ ಸ್ವರೂಪ | ರಿಸ್ಕ್/ ಅಪಾಯದ ಮಟ್ಟ |
|---|---|---|
| ಇಕ್ವಿಟಿ ಫಂಡ್‌ಗಳು | ಮೂಲಧನ ವೃದ್ಧಿಯ ಸಾಮಾನ್ಯ ಉದ್ದೇಶದೊಂದಿಗೆ ಮುಖ್ಯವಾಗಿ ಕಂಪೆನಿಗಳ ಷೇರ್‌ಗಳಲ್ಲಿ ವಿನಿಯೋಜಿಸಲಾಗುತ್ತದೆ. | ಮಧ್ಯಮದಿಂದ ಉಚ್ಛ |
| ಇನ್‌ಕಮ್, ಫಿಕ್ಸ್‌ಡ್ ಇಂಟರೆಸ್ಟ್ ಮತ್ತು ಬಾಂಡ್ ಫಂಡ್‌ಗಳು | ಕಾರ್ಪೊರೇಟ್ ಬಾಂಡ್‌ಗಳು, ಸರಕಾರಿ ಸೆಕ್ಯುರಿಟಿಗಳಲ್ಲಿ ಮತ್ತು ಇತರ ಸ್ಥಿರ ಆದಾಯ ಇನ್‌ಸ್ಟ್ರುಮೆಂಟ್‌ಗಳಲ್ಲಿ ವಿನಿಯೋಜಿಸಲಾಗುತ್ತದೆ. | ಮಧ್ಯಮ |
| ಕ್ಯಾಶ್ ಫಂಡ್‌ಗಳು | ಕೆಲವು ಸಲ ಮನೀ ಮಾರ್ಕೆಟ್ ಫಂಡ್‌ಗಳೆಂದು ಪರಿಚಿತವಿದೆ - ನಗದು, ಬ್ಯಾಂಕ್ ಡಿಪಾಸಿಟ್‌ಗಳು ಮತ್ತು ಮನೀ ಮಾರ್ಕೆಟ್ ಇನ್‌ಸ್ಟ್ರುಮೆಂಟ್‌ಗಳಲ್ಲಿ ವಿನಿಯೋಜಿಸಲಾಗುತ್ತದೆ. | ಕಡಿಮೆ |
| ಬ್ಯಾಲೆನ್ಸ್ಡ್ ಫಂಡ್‌ಗಳು | ಇಕ್ವಿಟಿ ವಿನಿಯೋಜನೆಯನ್ನು ಸ್ಥಿರ ಇಂಟರೆಸ್ಟ್ ಇನ್‌ಸ್ಟ್ರುಮೆಂಟ್‌ಗಳೊಂದಿಗೆ ಸಂಯೋಜಿಸುತ್ತದೆ. | ಮಧ್ಯಮ |



**ಪ್ರ. ಯೂಲಿಪ್‌ನಲ್ಲಿನ ಶುಲ್ಕಗಳು, ಫೀಗಳು ಮತ್ತು ಕಡಿತಗಳಾವುವು**

ಉ. ಬೇರೆ ಬೇರೆ ಇನ್‌ಶೂರರರಿಂದ ನೀಡಲಾಗುತ್ತಿರುವ ಯೂಲಿಪ್‌ಗಳು ಬೇರೆ ಬೇರೆ ಶುಲ್ಕಗಳ ರಚನೆಗಳನ್ನು ಹೊಂದಿದೆ. ಬೇರೆ ಬೇರೆ ಪ್ರಕಾರಗಳ ಫೀಗಳನ್ನು ಮತ್ತು ಶಲ್ಕಗಳನ್ನು ಈ ಕೆಳಗೆ ನೀಡಲಾಗಿದೆ. ಕಾಲಕ್ರಮೇಣ ಫೀಗಳನ್ನು ಮತ್ತು ಶುಲ್ಕಗಳನ್ನು ಪರಿಷ್ಕರಿಸುವ ಹಕ್ಕು ಇನ್‌ಶೂರರರಿಗಿದೆ ಎಂಬುದನ್ನು ಗಮನಿಸಬೇಕು

**ಪ್ರೀಮಿಯಂ ಅಲೊಕೇಶನ್ ಶುಲ್ಕ**

ಇದು ಪಾಲಿಸಿಯಡಿಯಲ್ಲಿ ಯೂನಿಟ್‌ಗಳನ್ನು ಅಲೊಕೇಟ್ ಮಾಡುವ ಮೊದಲು ಶುಲ್ಕಗಳ ಸಲುವಾಗಿ ಎಪ್ರೋಪ್ರಿಯೇಟ್ ಮಾಡಲಾಗುವ ಪ್ರೀಮಿಯಂನ ಪ್ರತಿಶತವಾಗಿದೆ. ಈ ಶುಲ್ಕವು ಕಮಿಷನ್ ವೆಚ್ಚಗಳನ್ನಲ್ಲದೆ ಆರಂಭಿಕ ಮತ್ತು ನವೀಕರಣ ವೆಚ್ಚಗಳನ್ನು ಸಾಮಾನ್ಯವಾಗಿ ಒಳಗೊಂಡಿರುತ್ತದೆ.

**ಮೊರ್ಟಾಲಿಟಿ ಶುಲ್ಕ**

ಪ್ಲಾನ್‌ನಡಿಯಲ್ಲಿ ವಿಮಾ ಸುರಕ್ಷೆ ಒದಗಿಸುವ ವೆಚ್ಚಕ್ಕಾಗಿ ಶುಲ್ಕಗಳಿರುತ್ತವೆ. ಮೊರ್ಟಾಲಿಟಿ ಶುಲ್ಕಗಳು ವಯಸ್ಸು, ಸುರಕ್ಷೆಯ ಮೊತ್ತ, ಆರೋಗ್ಯದ ಸ್ಥಿತಿ ಇತ್ಯಾದಿ ಅನೇಕ ಅಂಶಗಳನ್ನು ಅವಲಂಬಿಸಿದೆ.

**ಫಂಡ್ ನಿರ್ವಹಣಾ ಫೀಗಳು**

ಇವು ಫಂಡ್(ಗಳ)ನ ನಿರ್ವಹಣೆಗಾಗಿ ವಿಧಿಸಲಾಗುವ ಫೀಗಳಾಗಿವೆ ಮತ್ತು ನಿವ್ವಳ ಸೊತ್ತು ಮೌಲ್ಯವನ್ನು (ಎನ್‌ಎವಿ) ಲೆಕ್ಕ ಮಾಡುವ ಮೊದಲೇ ಕಡಿತ ಮಾಡಿಕೊಳ್ಳಲಾಗುತ್ತದೆ.

**ಪಾಲಿಸಿ/ ಆಡಳಿತ ಶುಲ್ಕಗಳು**

ಇವು ಪ್ಲಾನ್‌ನ ಆಡಳಿತದ ಫೀಸ್‌ಗಳಾಗಿವೆ ಮತ್ತು ಯೂನಿಟ್‌ಗಳನ್ನು ರದ್ದುಪಡಿಸುವ ಮೂಲಕ ವಿಧಿಸಲಾಗುತ್ತದೆ. ಇದು ಪಾಲಿಸಿಯ ಅವಧಿಯಾದ್ಯಂತ ಸಮಾನವಾಗಿರಬಹುದು ಅಥವಾ ಪೂರ್ವ ನಿರ್ಧಾರಿತ ದರದಲ್ಲಿ ವ್ಯತ್ಯಾಸವಾಗಬಹುದು.

**ಸರಂಡರ್ ಶುಲ್ಕಗಳು**

ಪಾಲಿಸಿಯ ನಿಬಂಧನೆಗಳಲ್ಲಿ ನಮೂದಿಸಲಾದಂತೆ ಅನ್ವಯಿಸುವಲ್ಲೆಲ್ಲಾ ಯೂನಿಟ್‌ಗಳ ಅವಧಿಗೆ ಮುನ್ನ ಭಾಗಶಃ ಅಥವಾ ಪೂರ್ಣ

ನಗದೀಕರಣಕ್ಕಾಗಿ ಸರಂಡರ್ ಶುಲ್ಕವನ್ನು ಕಡಿತಮಾಡಬಹುದು.

**ಫಂಡ್ ಸ್ವಿಚಿಂಗ್‌ಗೆ ಶುಲ್ಕ**

ಸಾಮಾನ್ಯವಾಗಿ ಯಾವುದೇ ಶುಲ್ಕವಿಲ್ಲದೆ ಸೀಮಿತ ಸಂಖ್ಯೆಯಲ್ಲಿ ಫಂಡ್ ಸ್ವಿಚ್‌ಗೆ ಅನುವು ಮಾಡಲಾಗುತ್ತಿದ್ದು, ನಂತರದ ಸ್ವಿಚ್‌ಗಳು ಶುಲ್ಕಗಳಿಗೆ ಒಳಪಟ್ಟಿರಬಹುದು.

**ಸೇವಾಕರ ಕಡಿತಗಳು**

ಯೂನಿಟ್‌ಗಳ ಅಲಾಟ್‌ಮೆಂಟ್‌ನ ಮೊದಲು ಪ್ರೀಮಿಯಂನ ಅಪಾಯದ ಭಾಗದಿಂದ ಅನ್ವಯಿಸುವ ಸೇವಾ ಕರವನ್ನು ಕಡಿತ ಮಾಡಲಾಗುತ್ತದೆ.

ಎಲ್ಲಾ ಶುಲ್ಕಗಳನ್ನೂ ಮತ್ತು ಅಪಾಯದ ಸುರಕ್ಷೆಯ ಕಡಿತ ಮಾಡಿದ ನಂತರದ ಪ್ರೀಮಿಯಂನ ಭಾಗವನ್ನು ಪ್ರೀಮಿಯಂನ್ನು ಯೂನಿಟ್‌ಗಳನ್ನು ಖರೀದಿಸಲು ಉಪಯೋಗಿಸಲಾಗುವುದೆಂಬುದನ್ನು ವಿನಿಯೋಜಕರು ಗಮನದಲ್ಲಿರಿಸಿಕೊಳ್ಳಬಹುದು.

**ಪ್ರ. ಪ್ರಸ್ತಾವಕ್ಕೆ ಸಹಿ ಮಾಡುವ ಮೊದಲು ಈ ಕೆಳಗಿನವುಗಳನ್ನು ಪರಿಶೀಲಿಸಿಕೊಳ್ಳಬೇಕು.**

ಉ. ಈ ಕೆಳಗಿನವುಗಳ ಸಲುವಾಗಿ ಅಂಗೀಕೃತ ಮಾರಾಟ ಬ್ರೋಷರನ್ನು ಪರೀಶೀಲಿಸಬೇಕು.

- ಪಾಲಿಸಿಯಡಿಯಲ್ಲಿ ಕಡಿತ ಮಾಡಲಾಗುವ ಎಲ್ಲಾ ಶುಲ್ಕಗಳು
- ಅವಧಿಗೆ ಮುನ್ನ ಸರಂಡರ್ ಮಾಡಿದಲ್ಲಿ ಪಾವತಿ
- ವೈಶಿಷ್ಟ್ಯಗಳು ಮತ್ತು ಲಾಭಗಳು
- ಮಿತಿಗಳು ಮತ್ತು ಹೊರತು ಪಡಿಸುವಿಕೆಗಳು
- ಲಾಪ್ಸೇಷನ್ ಮತ್ತು ಅದರ ಪರಿಣಾಮಗಳು
- ಇತರ ಹೊರಗೆಡಹುವಿಕೆಗಳು
- ಜೀವ ವಿಮಾ ಕೌನ್ಸಿಲ್‌ನಿಂದ ನಿರ್ದಿಷ್ಟಪಡಿಸಲಾದ 6% ಮತ್ತು 10% ಪ್ರತಿಫಲದಂತೆ ಎರಡು ಸಂದರ್ಭಗಳಲ್ಲಿ ಪಾವತಿಸಲಾಗುವ ಲಾಭಗಳನ್ನು ಪ್ರೊಜೆಕ್ಟ್ ಮಾಡುವ ವಿವರಣೆ.



**ಪ್ರ. ಯೂನಿಟ್‌ಗಳನ್ನು ಖರೀದಿಸಲು ಎಷ್ಟು ಪ್ರೀಮಿಯಂನ್ನು ಉಪಯೋಗಿಸಲಾಗುತ್ತದೆ ?**

ಉ. ಸಂದಾಯವಮಾಡಿದ ಪೂರ್ಣ ಪ್ರೀಮಿಯಂ ಮೊತ್ತವನ್ನು ಯೂನಿಟ್‌ಗಳನ್ನು ಖರೀದಿಸಲು ಉಪಯೋಗಿಸಲಾಗುವುದಿಲ್ಲ. ಇನ್‌ಶೂರರು ಬೇರೆ ಬೇರೆ ಶುಲ್ಕಗಳು, ಫೀಸ್ ಮತ್ತು ಕಡಿತಗಳಗಾಗಿ ಏರ್ಪಾಡು ಮಾಡಿದ ನಂತರದ ಪ್ರೀಮಿಯಂನ ಭಾಗದ ಮೇಲೆ ಯೂನಿಟ್‌ಗಳನ್ನು ಅಲಾಟ್‌ಮಾಡುತ್ತಾರೆ. ಆದರೆ ಯೂನಿಟ್‌ಗಳನ್ನು ಖರೀದಿಸಲು ಉಪಯೋಗಿಸುವ ಪ್ರೀಮಿಯಂನ ಪ್ರಮಾಣವು ಉತ್ಪನ್ನದಿಂದ ಉತ್ಪನ್ನಕ್ಕೆ ಬೇರೆ ಬೇರೆಯಾಗಿರುತ್ತದೆ.

ಪ್ರೀಮಿಯಂನಿಂದ ಶುಲ್ಕಗಳನ್ನು ಮೊದಲು ಕಡಿತ ಮಾಡಿ ಉಳಿದ ಮೊತ್ತವನ್ನು ಯೂನಿಟ್‌ಗಳನ್ನು ಅಲೊಕೇಟ್ ಮಾಡಲು ಉಪಯೋಗಿಸಲಾಗುವುದರಿಂದ ಅಲೊಕೇಟ್ ಮಾಡಲಾಗುವ ಯೂನಿಟ್‌ಗಳ ಒಟ್ಟು ಹಣದ ಮೌಲ್ಯವು ಸಂದಾಯ ಮಾಡಲಾದ ಪ್ರೀಮಿಯಂ ಮೊತ್ತಕ್ಕಿಂತ ಕಡಿಮೆ ಇರುತ್ತದೆ.

**ಪ್ರ. ಪಾಲಿಸಿಯನ್ನು ಖರೀದಿಸಿದ ನಂತರ ತೃಪ್ತರಾಗದಿದ್ದರೆ ಪ್ರೀಮಿಯಂಗಳು ಮರಳಿ ಸಿಗುವಂತೆ ಮಾಡಬಹುದೇ ?**

ಉ. ಪಾಲಿಸಿ ಧಾರಕರು ಪಾಲಿಸಿಯ ನಿಯಮ ಮತ್ತು ನಿಬಂಧನೆಗಳಿಗೆ ಒಪ್ಪಿಕೊಳ್ಳದಿದ್ದರೆ, ಪಾಲಿಸಿ ದಸ್ತಾವೇಜನ್ನು ಸ್ವೀಕರಿಸಿದ 15 ದಿನಗಳೊಳಗೆ (ಫ್ರೀ ಲುಕ್ ಅವಧಿ) ಪ್ರೀಮಿಯಂಗಳನ್ನು ಮರಳಿಸಲು ಕೇಳಿಕೊಳ್ಳಬಹುದು. ವೈದ್ಯಕೀಯ ಪರೀಕ್ಷೆ, ಸ್ಟಾಂಪ್ ಡ್ಯೂಟಿ ಮತ್ತು ಸುರಕ್ಷೆಯ ಅವಧಿಯ ಪ್ರಮಾಣಾನುಸಾರ ಅಪಾಯ ಪ್ರೀಮಿಯಂನ ಬಗೆಗಿನ ವೆಚ್ಚಗಳ ಕಡಿತಕೊಳ್ಳಪಟ್ಟು ಯೂನಿಟ್‌ಗಳನ್ನು ರದ್ದುಪಡಿಸುವ ಮೂಲಕ ವಿಧಿಸಲಾಗಿರುವ ಶುಲ್ಕಗಳನ್ನೊಳನ್ನೊಳಗೊಂಡು ಫಂಡ್ ಮೌಲ್ಯವನ್ನು ಪಾಲಿಸಿ ಧಾರಕರಿಗೆ ಮರುಪಾವತಿಸಲಾಗುತ್ತದೆ.

**ಪ್ರ. ನಿವ್ವಳ ಸೊತ್ತು ಮೌಲ್ಯ (ಎನ್‌ಎವಿ) ಎಂದರೇನು ?**

ಉ. ಎನ್‌ಎವಿ ಎಂದರೆ ಒಂದು ನಿರ್ದಿಷ್ಟ ದಿನದಂದು ಫಂಡ್‌ನಲ್ಲಿನ ಪ್ರತಿಯೊಂದೂ ಯೂನಿಟ್‌ನ ಮೌಲ್ಯವಾಗಿದೆ. ಪ್ರತಿಯೊಂದು ಫಂಡ್‌ನ ಎನ್‌ಎವಿಯನ್ನು ಆಯಾಯ ಇನ್‌ಶೂರರ ವೆಬ್‌ಸೈಟ್‌ನಲ್ಲಿ ತೋರಿಸಲಾಗುತ್ತದೆ.

**ಪ್ರ.** **ಪಾಲಿಸಿಯ ಅವಧಿಯಲ್ಲಿ ಅಪಾಯದ ಘಟನೆ ಉಂಟಾದರೆ ಯಾವ ಲಾಭವನ್ನು ಪಾವತಿಸಲಾಗುತ್ತದೆ ?**

ಉ. ಪಾಲಿಸಿಯ ಕಾಲಾವಧಿಯಲ್ಲಿ ವಿಮೆ ಮಾಡಿಸಿಕೊಂಡವರಿಗೆ ಅಪಾಯ ಸಂಭವಿಸಿದಲ್ಲಿ ಪಾಲಿಸಿಯ ನಿಬಂಧನೆಗಳಂತೆ ವಿಮಾ ಮೊತ್ತ ಮತ್ತು/ ಅಥವಾ ಫಂಡ್ ಯೂನಿಟ್‌ಗಳ ಮೌಲ್ಯವನ್ನು ಸಾಮಾನ್ಯವಾಗಿ ಪಾವತಿಸಲಾಗುತ್ತದೆ.

**ಪ್ರ.** **ಪಾಲಿಸಿಯು ಪರಿಪಕ್ವಗೊಂಡಾಗ ಯಾವ ಲಾಭವು ಪಾವತಿಸಲ್ಪಡುತ್ತದೆ ?**

ಉ. ಪಾಲಿಸಿಯು ಪರಿಪಕ್ವಗೊಂಡಾಗ ಬೋನಸ್, ಏನಾದರೂ ಇದ್ದರೆ, ಅದರೊಂದಿಗೆ ಫಂಡ್ ಯೂನಿಟ್‌ಗಳ ಮೌಲ್ಯವನ್ನು ಪಾವತಿಸಲಾಗುತ್ತದೆ.

**ಪ್ರ.** **ನಿಯಮಿತ ಪ್ರೀಮಿಯಂ ಅಲ್ಲದೆ ಹೆಚ್ಚುವರಿ ಮೊತ್ತವನ್ನು ವಿನಿಯೋಜಿಸುವುದು ಸಾಧ್ಯವಿದೆಯೇ ?**

ಉ. ಹೌದು. ಉತ್ಪನ್ನದಲ್ಲಿ ಈ ಸೌಲಭ್ಯವು ಲಭ್ಯವಿದ್ದರೆ, ನಿಯಮಿತ ಪ್ರೀಮಿಯಂ ಅಲ್ಲದೆ ಅವರ ಆಯ್ಕೆಯಂತೆ ಹೆಚ್ಚುವರಿ ಮೊತ್ತವನ್ನು ವಿನಿಯೋಜಿಸಬಹುದು. ಈ ಸೌಲಭ್ಯವನ್ನು ''ಟಾಪ್ ಅಪ್'' ಸೌಲಭ್ಯ ಎನ್ನಲಾಗುತ್ತದೆ.

**ಪ್ರ.** **ಯೂಲಿಪ್ ಪಾಲಿಸಿಯನ್ನು ತೆಗೆದುಕೊಂಡ ನಂತರ ವಿನಿಯೋಜನಾ ಫಂಡನ್ನು ಸ್ವಿಚ್ ಮಾಡಬಹುದೇ ?**

ಉ. ಹೌದು. ಉತ್ಪನ್ನದಲ್ಲಿ ಈ ಸೌಲಭ್ಯ ಇರುವುದಾದರೆ ಸ್ವಿಚ್ ಆಯ್ಕೆಯು ಪಾಲಿಸಿಯಲ್ಲಿನ ಒಂದು ಫಂಡ್‌ನಿಂದ ಮತ್ತೊಂದಕ್ಕೆ ವರ್ಗಾಯಿಸುವ ಆಯ್ಕೆಯನ್ನು ನೀಡುತ್ತದೆ. ನಿರ್ದಿಷ್ಟ ಸಂಖ್ಯೆಯ ಸ್ವಿಚ್‌ಗಳನ್ನು ಸಾಮಾನ್ಯವಾಗಿ ಉಚಿತವಾಗಿ ಮಾಡಲಾದರೂ ನಿರ್ದಿಷ್ಟ ಸಂಖ್ಯೆಗಿಂತ ಹೆಚ್ಚಿನ ಸ್ವಿಚ್‌ಗಳಿಗೆ ಫೀಯನ್ನು ವಿಧಿಸಲಾಗುತ್ತದೆ.

**ಪ್ರ.** **ಭಾಗಶಃ ನಗದೀಕರಣ/ ಹಿಂತೆಗೆತ ಮಾಡಬಹುದೇ ?**

ಉ. ಹೌದು. ಉತ್ಪನ್ನಗಳು ''ಭಾಗಶಃ ಹಿಂತೆಗೆತ'' ಆಯ್ಕೆಯನ್ನು ಹೊಂದಿರಬಹುದಾಗಿದ್ದು ಇದು ಪಾಲಿಸಿಯಲ್ಲಿನ ವಿನಿಯೋಜನೆಯಲ್ಲಿನ ಒಂದು ಭಾಗವನ್ನು ಹಿಂತೆಗೆದುಕೊಳ್ಳುವ ಸೌಲಭ್ಯವನ್ನು ನೀಡುತ್ತದೆ. ಯೂನಿಟ್‌ಗಳ ಒಂದು ಭಾಗವನ್ನು ರದ್ದುಪಡಿಸುವ ಮೂಲಕ ಹೀಗೆ ಮಾಡಲಾಗುತ್ತದೆ.



**ಪ್ರ.** **ಪ್ರೀಮಿಯಂಗಳ ಸಂದಾಯವನ್ನು ಮುಂಚಿತವಾಗಿ ನಿಲ್ಲಿಸಿದರೆ ಏನಾಗುತ್ತದೆ ?**

ಉ. ಅ) ಆರಂಭಗೊಂಡು ಮೂರು ವರ್ಷಗಳೊಳಗೆ ಮುಂಚಿತವಾಗಿ ನಿಲ್ಲಿಸುವುದು - ಆರಂಭಗೊಂಡಂದಿನಿಂದ ಕನಿಷ್ಠ ನಿರಂತರ ಮೂರು ವರ್ಷಗಳ ತನಕ ಎಲ್ಲಾ ಪ್ರೀಮಿಯಂಗಳನ್ನೂ ಸಂದಾಯ ಮಾಡಿರದಿದ್ದರೆ, ವಿಮಾ ಸುರಕ್ಷೆಯು ಕೂಡಲೇ ಕೊನೆಗೊಳ್ಳುತ್ತದೆ. ಇನ್‌ಶೂರರು ಅನುವು ಮಾಡಲಾದ ಅವಧಿಯೊಳಗೆ ಪುನ:ಶ್ಚೇತನಗೊಳಿಸುವ ಅವಕಾಶವನ್ನು ನೀಡಬಹುದು; ಆ ಅವಧಿಯೊಳಗೆ ಪಾಲಿಸಿಯನ್ನು ಪುನ: ಶ್ಚೇತನಗೊಳಿಸದಿದ್ದರೆ ಮೂರನೇ ಪಾಲಿಸಿ ವಾರ್ಷಿಕೋತ್ಸವದ ಕೊನೆಯಲ್ಲಿ ಅಥವಾ ಪುನ: ಶ್ಚೇತನಕ್ಕಾಗಿ ಅನುವು ಮಾಡಿದ ಅವಧಿಯ ಕೊನೆಗೆ, ಇವುಗಳಲ್ಲಿ ಯಾವುದೇ ನಂತರವೋ ಆಗ ಸರಂಡರ್ ಮೌಲ್ಯವನ್ನು ಪಾವತಿಸಲಾಗುತ್ತದೆ.

ಆ) ಆರಂಭಗೊಂಡ ಮೂರು ವರ್ಷಗಳ ನಂತರ ಮುಂಚಿತವಾಗಿ ನಿಲ್ಲಿಸುವುದು - ಪುನ:ಶ್ಚೇತನದ ಸಲುವಾಗಿ ಅನುವು ಮಾಡಲಾದ ಅವಧಿಯ ಕೊನೆಯಲ್ಲಿ ಸರಂಡರ್ ಮೌಲ್ಯವನ್ನು ಪಾವತಿಸುವ ಮೂಲಕ ಒಪ್ಪಂದವನ್ನು ಕೊನೆಗೊಳಿಸಲಾಗುತ್ತದೆ. ಪಾಲಿಸಿ ಧಾರಕರು ಆಯ್ಕೆ ಮಾಡಿದರೆ, ಫಂಡ್ ಮೌಲ್ಯವು ಒಂದು ಪೂರ್ಣ ವರ್ಷದ ಪ್ರೀಮಿಯಂಗಿಂತ ಕಡಿಮೆಯಾಗದೆ ಇರವ ತನಕ ಸೂಕ್ತ ಶುಲ್ಕಗಳನ್ನು ವಿಧಿಸುವ ಮೂಲಕ ಇನ್‌ಶೂರರು ವಿಮಾ ಸುರಕ್ಷೆಯನ್ನು ಮುಂದುವರಿಸುವ ಕೊಡುಗೆ ನೀಡಬಹುದು. ಫಂಡ್ ಮೌಲ್ಯವು ಒಂದು ಪೂರ್ಣ ವರ್ಷದ ಪ್ರೀಮಿಯಂಗೆ ಸಮನಾದ ಮೊತ್ತಕ್ಕೆ ತಲಪಿದಾಗ, ಫಂಡ್ ಮೌಲ್ಯವನ್ನು ಪಾವತಿಸುವ ಮೂಲಕ ಒಪ್ಪಂದವನ್ನು ಕೊನೆಗೊಳಿಸಲಾಗುತ್ತದೆ.

ಸಿ) 5 ವರ್ಷ ಲಾಕ್-ಇನ್ ಅವಧಿ ಇರುವ ಪಾಲಿಸಿಗಳು - 01-9-2010 ರಂದು ಅಥವಾ ನಂತರ ಖರೀದಿಸಲಾದ ಪಾಲಿಸಿಗಳಿಗೆ ಲಾಕ್ ಇನ್ ಅವಧಿಯನ್ನು 5 ವರ್ಷಗಳಿಗೆ ಏರಿಸಲಾಗಿದೆ. ಪ್ರೀಮಿಯಂ ಪಾವತಿಯನ್ನು ಮುಂಚಿತವಾಗಿ ನಿಲ್ಲಿಸಿದಲ್ಲಿ ಪಾಲಿಸಿಧಾರಕರಿಗೆ ಈ ಮುಂದಿನ ಆಯ್ಕೆಗಳಿರುತ್ತವೆ: i) ಪಾಲಿಸಿಯನ್ನು ಪುನ:ಶ್ಚೇತನಗೊಳಿಸುವುದು ಅಥವಾ ii) ಯಾವುದೇ ಅಪಾಯದ ಸುರಕ್ಷೆ ಇಲ್ಲದೆ ಸಂಪೂರ್ಣವಾಗಿ ಹಿಂತೆಗೆದುಕೊಳ್ಳುವುದು.

ಗ್ರೇಸ್ ಅವಧಿಯು ಮುಗಿದ ತಾರೀಖಿನಿಂದ 15 ದಿನಗಳೊಳಗೆ ಈ ಮೇಲಿನ ಆಯ್ಕೆಗಳನ್ನು ನೀಡುತ್ತಾ ಇನ್‌ಶೂರರು ನಿಮಗೆ ಒಂದು

ಸೂಚನೆಯನ್ನು ಕಳುಹಿಸಿ ಕೊಡುತ್ತಾರೆ. ಇಂತಹ ಸೂಚನೆ ತಲುಪಿದ 30 ದಿನಗಳೊಳಗೆ ಯಾವುದೇ ಆಯ್ಕೆ ಮಾಡದಿದ್ದರೆ ಅಥವಾ ಆಯ್ಕೆ (II) ನ್ನು ಮಾಡಲಾದರೆ, ಮುಂಚಿತವಾಗಿ ನಿಲ್ಲಿಸಲಾದ ಪಾಲಿಸಿಯ ಉತ್ಪತ್ತಿಯನ್ನು ಮರುಪಾವತಿಸಲಾಗುತ್ತದೆ ಆದರೆ ಲಾಕ್-ಇನ್ ಅವಧಿಯು ಮುಗಿಯುವ ಮೊದಲು ಮರುಪಾವತಿಸಲಾಗುವುದಿಲ್ಲ. ಹೀಗೆ ಮುಂಚಿತವಾಗಿ ನಿಲ್ಲಿಸುವಿಕೆಯು ಲಾಕ್ ಇನ್ ಅವಧಿಯೊಳಗೆ ಇದ್ದರೆ, ಮುಂಚಿತವಾಗಿ ನಿಲ್ಲಿಸಿದ ತಾರೀಖಿನಿಂದ ಎರಡು ವರ್ಷಗಳ ಅವಧಿಯ ಮೊದಲು ಆದರೆ ಲಾಕ್-ಇನ್ ಅವಧಿಯು ಕೊನೆಗೊಳ್ಳುವ ಅವಧಿಗೆ ತಡವಾಗದಂತೆ ಪಾಲಿಸಿ ಧಾರಕರಿಗೆ ಪಾಲಿಸಿಯನ್ನು ಪುನ:ಶ್ಚೇತನಗೊಳಿಸುವ ಹಕ್ಕು ಇದೆ.

ಪ್ರ. ಇನ್‌ಶೂರರು ಪಾಲಿಸಿಧಾರಕರಿಗೆ ವಿನಿಯೋಜನೆಗಳಿಗೆ ಸಂಬಂಧಿಸಿದ ಯಾವ ಮಾಹಿತಿಯನ್ನು ಒದಗಿಸುತ್ತಾರೆ?

ಉ. ಇನ್‌ಶೂರರು ಆರ್ಥಿಕ ಪರಿಸ್ಥಿತಿ, ಮಾರುಕಟ್ಟೆ ವಿಕಾಸ ಮುಂತಾದುವುಗಳಿಗೆ ಸಂಬಂಧಿಸಿ ಹಿಂದಿನ ವರ್ಷದಲ್ಲಿನ ಫಂಡ್‌ನ ಕಾರ್ಯಾಚರಣೆಯನ್ನೊಳಗೊಂಡ ಒಂದು ವಾರ್ಷಿಕ ವರದಿಯನ್ನು ಕಳುಹಿಸಲು ಜವಾಬ್ದಾರರಾಗಿದ್ದು, ಇದು ಫಂಡ್ ಕಾರ್ಯಾಚರಣೆಯ ವಿಶ್ಲೇಷಣೆ, ಫಂಡ್‌ನ ವಿನಿಯೋಜನಾ ಪೋರ್ಟ್‌ಫೋಲಿಯೋ, ವಿನಿಯೋಜನಾ ಕೌಶಲಗಳು ಮತ್ತು ಅನುಸರಿಸಲಾದ ಅಪಾಯ ನಿಯಂತ್ರಣ ವಿಧಾನಗಳನ್ನು ಒಳಗೊಂಡಿರಬೇಕು.

### ಪಾಲಿಸಿಧಾರಕರಿಗೆ ಸೇವೆ ಸಲ್ಲಿಸಲು ಐಆರ್‌ಡಿಎ ಇವರಿಂದ ನಿಗದಿಗೊಳಿಸಲಾದ ತಗಲುವ ಸಮಯ

| ಸೇವೆ | ಗರಿಷ್ಠ ಸಮಯ |
|---|---|
| ಸಾಮಾನ್ಯ | |
| ಪ್ರಸ್ತಾವವನ್ನು ಪ್ರೊಸೆಸ್ ಮಾಡುವುದು ಆವಶ್ಯಕತೆ/ ಪಾಲಿಸಿ ನೀಡಿಕೆ/ ರದ್ದು ಪಡಿಸುವಿಕೆ ಯನ್ನೊಳಗೊಂಡು ನಿರ್ಧಾರವನ್ನು ತಿಳಿಸುವುದು | 15 ದಿನಗಳು |
| ಪ್ರಸ್ತಾವದ ಪ್ರತಿಯನ್ನು ಪಡೆದುಕೊಳ್ಳುವುದು | 30 ದಿನಗಳು |
| ಪಾಲಿಸಿ ನೀಡಿದ ನಂತರದ ಸೇವೆ - ದೋಷ ಪ್ರಸ್ತಾವದ ಡಿಪಾಸಿಟ್‌ನ ಹಿಂತಿರುಗಿಸುವಿಕೆಯ ಬಗ್ಗೆ ಕೋರಿಕೆಗಳು ಮತ್ತು ನಾನ್-ಕ್ಲೈಮ್ ಸಂಬಂಧಿತ ಸೇವೆಗಳ ಕೋರಿಕೆಗಳು | 10 ದಿನಗಳು |



| | |
|---|---|
| ಜೀವ ವಿಮೆ | |
| ಸರಂಡರ್ ಮೌಲ್ಯ/ ಆನುಯುಟಿ/ ಪೆನ್ಶನ್ ಪ್ರೊಸೆಸ್ ಮಾಡುವುದು. | 10 ದಿನಗಳು |
| ಪರಿಪಕ್ವತೆಯ ಕ್ಲೈಮ್ / ಸರ್ವೈವಲ್ ಲಾಭ ಪೆನಲ್ ಬಡ್ಡಿ ಪಾವತಿಸದಿರುದಂಥಾದ್ದು | 15 ದಿನಗಳು |
| ಕ್ಲೈಮ್‌ನ್ನು ಸಲ್ಲಿಸಿದ ನಂತರ ಕ್ಲೈಮ್‌ನ ಆವಶ್ಯಕತೆಗಳನ್ನು ತಿಳಿಸುವುದು | 15 ದಿನಗಳು |
| ತನಿಖೆಯ ಆವಶ್ಯಕತೆ ಇಲ್ಲದೆ ಮತ್ತು ದಾವೆಗಳ ತೀರಿಕೆ | 30 ದಿನಗಳು |
| ತನಿಖೆಯ ಆವಶ್ಯಕತೆಯೊಂದಿಗೆ ಮತ್ತು ದಾವೆಯ ತೀರಣೆ/ ನಿರಾಕರಣೆ | 6 ತಿಂಗಳು |
| ಸಾಮಾನ್ಯ ವಿಮೆ | |
| ಸರ್ವೆ ರಿಪೋರ್ಟ್ ಸಲ್ಲಿಕೆ | 30 ದಿನಗಳು |
| ಇನ್‌ಶೂರರು ಸೇರಿಕೆ ವರದಿಯನ್ನು ಕೋರುವುದು. | 15 ದಿನಗಳು |
| ಮೊದಲ/ ಸೇರಿಕೆ ಸರ್ವೇ ರಿಪೋರ್ಟ್‌ನ್ನು ಪಡೆದ ನಂತರ ದಾವೆಯ ತೀರಿಕೆ / ತಿರಸ್ಕರಿಸುವಿಕೆ | 30 ದಿನಗಳು |
| ದೂರುಗಳು | |
| ದೂರಗಳ ಸ್ವೀಕೃತಿಯ ದಾಖಲಾತಿ | 3 ದಿನಗಳು |
| ದೂರಿನ ನಿವಾರಣೆ | 15 ದಿನಗಳು |

## 5. ನಿಮ್ಮಲ್ಲಿ ದೂರುಗಳಿದ್ದರೆ

ಕನ್‌ಸ್ಯೂಮರ್ ಅಫೇರ್ಸ್ ಡಿಪಾರ್ಟ್‌ಮೆಂಟ್ ಆಫ್ ಇನ್ ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ) ಇವರು ಸಮಗ್ರ ದೂರು ನಿರ್ವಹಣಾ ವ್ಯವಸ್ಥೆಯನ್ನು (ಐಜಿಎಮ್‌ಎಸ್) ಪರಿಚಯಿಸಿದ್ದು ಇದು ದೂರುಗಳ ನೋಂದಾವಣೆ ಮತ್ತು ಆದರ ತಾಜಾ ಸ್ಥಿತಿಯನ್ನು ತಿಳಿಯುವ ಒಂದು ಆನ್‌ಲೈನ್ ವ್ಯವಸ್ಥೆಯಾಗಿದೆ. ನೀವು ಮೊದಲಿಗೆ ನಿಮ್ಮ ದೂರನ್ನು ವಿಮಾ ಕಂಪೆನಿಯಲ್ಲಿ ನೋಂದಾಯಿಸಿ ಕೊಳ್ಳಬೇಕು ಮತ್ತು ಆದರ ನಿವಾರಣೆಯಿಂದ ನೀವು ತೃಪ್ತರಾಗದಿದ್ದರೆ ನೀವು ಅದನ್ನು www.igms.irda.gov.in ಇದನ್ನು ತಲಪುವ ಮೂಲಕ ಐಜಿಎಮ್‌ಎಸ್‌ನ ಮೂಲಕ ಐಆರ್‌ಡಿಎಗೆ ಕಳಹಿಸಬಹುದು. ನಿಮಗೆ ನೇರವಾಗಿ ಇನ್‌ಶೂರರ ದೂರು ವ್ಯವಸ್ಥೆಯನ್ನು ತಲಪಲು

ಸಾಧ್ಯವಾಗದಿದ್ದರೆ, ಐಜಿಎಮ್‌ಎಸ್ ಇವರು ನಿಮ್ಮ ದೂರನ್ನು ವಿಮಾ ಕಂಪೆನಿಯಲ್ಲಿ ನೋಂದಾಯಿಸಿಕೊಳ್ಳುವ ಪರ್ಯಾಯ ವ್ಯವಸ್ಥೆಯನ್ನು ಮಾಡುತ್ತಾರೆ.

ಐಜಿಎಮ್‌ಎಸ್‌ನ ಮೂಲಕ ನಿಮ್ಮ ದೂರನ್ನು ದಾಖಲಿಸುವುದು ಮಾತ್ರವಲ್ಲದೆ (ಅಂದರೆ ವೆಬ್) ದೂರುಗಳನ್ನು ದಾಖಲಿಸಲು ನಿಮಗೆ ಅನೇಕ ಮಾಧ್ಯಮಗಳಿವೆ- ಇ - ಮೈಲ್‌ನ ಮೂಲಕ (complaints@irda.gov.in) ಪತ್ರದ ಮೂಲಕ (ನಿಮ್ಮ ಪತ್ರಗಳನ್ನು ಕನ್‌ಸ್ಯೂಮರ್ ಅಫೇರ್ಸ್ ಡಿಪಾರ್ಟ್‌ಮೆಂಟ್, ಇನ್‌ಶೂರೆನ್ಸ್ ರೆಗ್ಯುಲೇಟರಿ ಅಂಡ್ ಡೆವಲಪ್‌ಮೆಂಟ್ ಅಥಾರಿಟಿ, 3 ನೇ ಮಹಡಿ, ಪರಿಶ್ರಮ್ ಭವನ, ಬಶೀರ್‌ಭಾಗ್, ಹೈದರಾಬಾದ್ : 4 ಇಲ್ಲಿಗೆ ಕಳುಹಿಸಿರಿ) **ಅಥವಾ ನಿಃಶುಲ್ಕ ನಂ : 155255** ಈ ನಿಃಶುಲ್ಕ ನಂಬರ್‌ನಲ್ಲಿ ಐಆರ್‌ಡಿಎ ಕಾಲ್ ಸೆಂಟರ್‌ಗೆ ಕರೆ ಮಾಡಿರಿ, ಇದರ ಮೂಲಕ ಐಆರ್‌ಡಿಎ ಉಚಿತವಾಗಿ ನಿಮ್ಮ ದೂರುಗಳನ್ನು ವಿಮಾ ಕಂಪೆನಿಗಳ ವಿರುದ್ಧ ನೋಂದಾಯಿಸಿಕೊಳ್ಳುತ್ತದೆ ಹಾಗೂ ಅದರ ಸ್ಥಿತಿಯನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಕಾಲ್ ಸೆಂಟರ್ ಕರೆಯ ಆಧಾರದಲ್ಲಿ ದೂರು ಫಾರ್ಮ್‌ನ್ನು ತುಂಬಿಸಲು ಸಹಾಯ ಮಾಡುತ್ತದೆ ಆವಶ್ಯಕವಾದಾಗಲೆಲ್ಲ ಅದು ವಿಮಾ ಕಂಪೆನಿಯ ವಿಳಾಸ, ಟೆಲಿಫೋನ್ ಕ್ರಮಾಂಕ, ವೆಬ್‌ಸೈಟ್ ವಿವರಗಳು , ಸಂಪರ್ಕ ನಂಬರ್, ಇ-ಮೈಲ್ ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವ ಮೂಲಕ ನೇರವಾಗಿ ಮೊದಲಿಗೆ ದೂರುಗಳನ್ನು ಸಲ್ಲಿಸುವ ಸೌಲಭ್ಯವನ್ನು ಒದಗಿಸುತ್ತದೆ. ಐಆರ್‌ಡಿಎ ಕಾಲ್‌ಸೆಂಟರ್ ಸೋಮವಾರದಿಂದ ಶನಿವಾರದ ತನಕ ಬೆಳಗ್ಗೆ ಗಂಟೆ 8 ರಿಂದ ರಾತ್ರಿ ಗಂಟೆ 8 ರ ತನಕ ಹಿಂದಿ, ಇಂಗ್ಲಿಷ್ ಮತ್ತು ವಿವಿಧ ಭಾರತೀಯ ಭಾಷೆಗಳಲ್ಲಿ 12 ತಾಸು X 6 ದಿನಗಳು ಸೇವಾ ವೇದಿಕೆಯ ಮೂಲಕ ವಾಸ್ತವಿಕ ಪರ್ಯಾಯ ಮಾಧ್ಯಮವನ್ನು ಪ್ರಸ್ತಾವಿತರಿಗೆ ಮತ್ತು ಪಾಲಿಸಿಧಾರಕರಿಗೆ ಸಮಗ್ರ ಕಾರ್ಯ ಸೌಲಭ್ಯವನ್ನು ಒದಗಿಸುತ್ತದೆ.



ಐಆರ್‌ಡಿಎಯಲ್ಲಿ ಒಂದು ದೂರನ್ನು ದಾಖಲಿಸಿದಾಗ, ಅದು ವಿಮಾ ಕಂಪೆನಿಯೊಂದಿಗೆ ಅದರ ನಿವಾರಣೆಗಾಗಿ ಪ್ರಯತ್ನಿಸುತ್ತದೆ. ದೂರನ್ನು ನಿವಾರಿಸಲು ಕಂಪೆನಿಗೆ 15 ದಿನಗಳನ್ನು ನೀಡಲಾಗುತ್ತದೆ. ಆವಶ್ಯಕ ಎನಿಸ್‌ದಲ್ಲಿ, ಐಆರ್‌ಡಿಎಯು ತನಿಖೆಗಳನ್ನು ಮತ್ತು ವಿಚಾರಣೆಗಳನ್ನು ಮಾಡುತ್ತದೆ. ಅಲ್ಲದೆ, ಅನ್ವಯವಾಗುವಲ್ಲೆಲ್ಲಾ, ರಿಡ್ರೆಸ್ಸಲ್ ಆಫ್ ಪಬ್ಲಿಕ್ ಗ್ರಿವೆನ್ಸಸ್ ರೂಲ್ಸ್ 1998 ರ ಪ್ರಕಾರ ದೂರು ನೀಡಿದವರನ್ನು ವಿಮಾ ಒಂಬುಡ್ಸ್‌ಮೆನ್‌ರನ್ನು ಸಂಪರ್ಕಿಸಲು ಸಲಹೆ ನೀಡುತ್ತದೆ.

**ಅನಂಗೀಕಾರ:**

ಈ ಕೈಪಿಡಿಯು ನಿಮಗೆ ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುವ ಉದ್ದೇಶವನ್ನು ಹೊಂದಿದೆ ಮತ್ತು ಇದು ಎಲ್ಲವನ್ನೂ ಒಳಗೊಂಡಿಲ್ಲ, ಇದೊಂದು ಶೈಕ್ಷಣಿಕ ಉಪಕ್ರಮವಾಗಿದೆ ಮತ್ತು ಯಾವುದೇ ಕಾನೂನು ಸಲಹೆಯನ್ನು ನೀಡುವ ಉದ್ದೇಶವನ್ನು ಹೊಂದಿಲ್ಲ.

Insurance is the subject matter of solicitation